# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ

ಸಂಪುಟ : 38 ಸಂಚಿಕೆ : 20 ಹೇಮಲಂಬಿ–ಜ್ಯೇಷ್ಠ ಕಲಿಯುಗಾಬ್ದ 5119 1–6–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4







## ಸುಶಿಕ್ಷಿತ ಸುಸಂಸ್ಕೃತ ಮಕ್ಕಳೇ ನಾಳಿನ ಆಸ್ತಿ

ಇತ್ತೀಚೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಫಲಿತಾಂಶ ಬಂದಾಗಿನಿಂದ ಒಂದು ವಾಟ್ಸಾಪ್ ಸಂದೇಶ ಹರಿದಾಡಲಾರಂಭಿಸಿದೆ: "ಶೇಕಡ 90 ಹಾಗೂ ಮೇಲ್ಪಟ್ಟು ಅಂಕಗಳನ್ನು ಪಡೆದ ಮಕ್ಕಳೇ, ನಿಮ್ಮ ಸುತ್ತಲಿನ ಪರಿಸರದಲ್ಲಿ ಕನಿಷ್ಠ ಇಪ್ಪತ್ತು ಹಕ್ಕಿ, ಸಸ್ಯ ಪ್ರಬೇಧಗಳನ್ನು ಗುರುತಿಸಬಲ್ಲಿರಾ? ನೀವು ಎಂದಾದರೂ ನಿಮ್ಮ ತಂದೆತಾಯಿಯರ ಕೆಲಸದಲ್ಲಿ ಭಾಗಿಯಾಗಿದ್ದೀರಾ? ಪ್ರತಿ ವರ್ಷ ಎಷ್ಟು ಪಠ್ಯೇತರ ಪುಸ್ತಕಗಳನ್ನು ಓದುತ್ತೀರಿ? ನೀವೆಂದಾದರೂ ಕತ್ತಿ ಹಿಡಿದು ತೆಂಗಿನ ಸಿಪ್ಪೆ ಬಿಡಿಸಿದ್ದೀರಾ? ಗುದ್ದಲಿ ಹಿಡಿದು ಗಿಡ ನೆಟ್ಟಿದ್ದೀರಾ? ಬ್ಯಾಂಕ್, ಅಂಚೆ ಇಲಾಖೆ, ಕೃಷಿ ಭೂಮಿ, ಸಣ್ಣ ಕೈಗಾರಿಕಾ ಕಾರ್ಖಾನೆಗಳು ಹೇಗೆ ಕೆಲಸ ಮಾಡುತ್ತವೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರಾ?" ಹೀಗೆ ಹಲವು ಪ್ರಶ್ನೆಗಳ ಪಟ್ಟಿ ಈ ಸಂದೇಶದಲ್ಲಿತ್ತು. ವಾಟ್ಸಾಪ್‌ನಲ್ಲಿಯೂ ಚರ್ಚೆ ಬಿರುಸಾಗಿ ನಡೆದಿತ್ತು. ಇದಕ್ಕೆ ಪ್ರತಿಯಾಗಿ ಯಾರೋ ಹೆಚ್ಚು ಅಂಕ ಪಡೆಯಲಾಗದವರೇ ಬರೆದಿರುವ ಸಾಲುಗಳಿವು ಎಂಬ ಮಾತುಗಳೂ ಕೇಳಿಬಂದವು. ಉತ್ತಮ ಅಂಕ ಪಡೆದು ಉತ್ತೀರ್ಣರಾಗುವುದು ಒಂದು ಸಾಧನೆ ಹೌದಾದರೂ, ದಿನನಿತ್ಯದ ಬದುಕಿನಲ್ಲಿ ಎದುರಾಗುವ ಕೆಲಸಗಳನ್ನೂ ನಮ್ಮ ಮಕ್ಕಳು ಅಷ್ಟೇ ಉತ್ತಮವಾಗಿ ನಿರ್ವಹಿಸಬಲ್ಲರೇ ಎನ್ನುವುದು ಆ ಸಂದೇಶ ಎತ್ತಿದ ಒಂದು ಪ್ರಶ್ನೆ. ಆ ನಿಟ್ಟಿನಲ್ಲಿ ಮೇಲಿನ ಪ್ರಶ್ನೆಗಳು ಸಮಂಜಸವಾಗಿವೆ ಎಂದೆನಿಸುತ್ತದೆ.

ನಾವಿಂದು ನಮ್ಮ ಮಕ್ಕಳ ಶಿಕ್ಷಣಕ್ಕಾಗಿ ಉತ್ತಮೋತ್ತಮ ಶಾಲೆಗಳನ್ನೇ ಹುಡುಕಿಕೊಂಡು ಹೋಗುತ್ತಿದ್ದೇವೆ. ಹೆಸರಿರುವ ಶಿಕ್ಷಣ ಸಂಸ್ಥೆಯಲ್ಲಿ ಸೀಟು ಪಡೆದರೆ ಉತ್ತಮ ಶಿಕ್ಷಣ ಸಿಗುತ್ತದೆ, ಅದರಿಂದ ಅವರಿಗೆ ಸಾಕಷ್ಟು ಸಂಬಳತರುವ ನೌಕರಿ ಸಿಗುತ್ತದೆ, ಹಣದಿಂದ ಬೇಕಾದುದನ್ನು ಖರೀದಿಸಬಹುದು ಹೀಗೆ ಸಾಮಾನ್ಯವಾಗಿ ಹೆಚ್ಚಿನ ಪಾಲಕರು ಯೋಚಿಸುತ್ತಾರೆ. ಕೆಲವು ಪಾಲಕರಿಗೆ ಈ ವಾದ ಒಪ್ಪಿಗೆಯಿಲ್ಲದಿದ್ದರೂ, ಸುಮ್ಮನೆ ನಮ್ಮ ಮಕ್ಕಳೇಕೆ ಉಳಿದವರಿಗಿಂತ ಹಿಂದೆ ಬೀಳಬೇಕು ಎನ್ನುವ ಒತ್ತಡವು ಕೆಲವೊಮ್ಮೆ ಪ್ರಭಾವ ಬೀರುತ್ತದೆ. ಈ ಧಾವಂತದಿಂದಾಗಿ ಮುಂಚೆಲ್ಲಾ ಐದು ವರ್ಷ ತುಂಬಿದ ಬಳಿಕ ಶಾಲೆಗೆ ಹೋಗುತ್ತಿದ್ದ ದಿನಗಳು ಇಂದು ಎರಡುವರೆ ವರ್ಷಗಳ ಮಕ್ಕಳನ್ನೂ ಶಾಲೆಗೆ ಅಟ್ಟುವ ಸಂದರ್ಭಗಳು ಪೋಷಕರಿಗೆ ಬಂದೊದಗಿದೆ. ಒಂದು ಕಾಲದಲ್ಲಿದ್ದ 'ಮನೆಯೇ ಮೊದಲ ಪಾಠಶಾಲೆ' ಎಂಬ ಉಕ್ತಿಯು ಗಾದೆಗಷ್ಟೇ ಸೀಮಿತವಾಗುತ್ತಲಿದೆ. ಮಕ್ಕಳು ಶಾಲೆಯ ಹೊರಗಡೆಯೂ ಕಲಿಯುವ ಸಮಯ ದೂರವಾಗುತ್ತಾ ಶಾಲೆಯೇ ಸರ್ವಸ್ವ ಎಂಬ ಮಾತುಗಳು ಪೋಷಕರಿರಲಿ, ಮಕ್ಕಳೂ ಆಡುತ್ತಿದ್ದಾರೆ. ಆದ್ದರಿಂದ ಶಾಲೆಗಳು ಕಲಿಕೆಗೆ ಹೊರಗುತ್ತಿಗೆ ಎಂಬಂತೆ ಭಾಸವಾಗುತ್ತಿದೆ.

ಕಾಲ ಬದಲಾದಂತೆ ಶಾಲೆಯ ಪಠ್ಯಗಳೂ ಬದಲಾಗುತ್ತವೆ ಎಂಬುದು ಹೊಸತೇನಲ್ಲ. ನಮ್ಮ ಹಿರಿಯರ ಕಾಲದ ಓದಿಗೂ ಇಂದಿಗೂ ಅಜಗಜಾಂತರ. ಇಂದಿನ ದಿನಗಳಲ್ಲಿ ವಿಜ್ಞಾನ, ಸಮಾಜ, ಗಣಿತ ಅವಶ್ಯಕತೆಗೆ ಬೇಕಾದಂತೆ ಹೆಚ್ಚು ಕ್ಲಿಷ್ಟಗೊಳ್ಳುತ್ತಲೇ ಹೋಗುತ್ತದೆ. ಇಂದು ವಿದ್ಯಾರ್ಥಿಗಳು ತಮ್ಮ ಜೀವನದ ಗುರಿಯಾಗಿ ಹೆಚ್ಚು ಆದಾಯ ನೀಡುವ ವೃತ್ತಿಯನ್ನು ಆಯ್ಕೆಮಾಡುತ್ತಿದ್ದಾರೆ. ಆ ವೃತ್ತಿಗೆ ಬೇಕಿರುವಷ್ಟೇ ಓದುವ ಅಭ್ಯಾಸವೂ ಸಾಮಾನ್ಯವಾಗಿಬಿಟ್ಟಿದೆ. ಹಾಗೆಯೇ ಭಾಷೆ, ಸಾಹಿತ್ಯ ಕಲೆಗಳನ್ನು ಕಲಿಯುವುದು ಪ್ರಯೋಜನಕ್ಕೆ ಬಾರದೇ ಇರುವುದು ಎನ್ನುವ ಭಾವನೆಯೂ ಬೆಳೆಯುತ್ತಿದೆ. ಭಾಷೆ, ಸಾಹಿತ್ಯವನ್ನು ಓದುವವರ ಸಂಖ್ಯೆ ತೀರಾ ಕಡಿಮೆಯಾಗಿದೆ. ಅಷ್ಟೇ ಅಲ್ಲದೇ ಮೂಲಭೂತ ವಿಜ್ಞಾನಗಳು, ಕೃಷಿ ವಿಜ್ಞಾನಗಳನ್ನು ಓದುವವರೂ ಕಡಿಮೆಯಾಗುತ್ತಲಿದ್ದಾರೆ. ಇತ್ತೀಚೆಗೆ ಸಂಗೀತ ನೃತ್ಯಗಳನ್ನು ಕಲಿಯುವುದು ಕಂಡುಬಂದರು ರಿಯಾಲಿಟಿ ಶೋ ಸಲುವಾಗಿಯೋ ಅಥವಾ ಶಾಲೆಯ ವಾರ್ಷಿಕೋತ್ಸವಗಳ ಪ್ರದರ್ಶನಗಳಿಗೆ ಮಾತ್ರ ಸೀಮಿತವಾಗುವುದೂ ಕಾಣುತ್ತದೆ. ಉದ್ಯೋಗ, ಹಣಗಳಿಸುವ ಸಲುವಾಗಿ ಓದು ಎಂಬುದು ನಮ್ಮಲ್ಲಿ, ನಮ್ಮ ಮಕ್ಕಳಲ್ಲಿ ಬೇರೂರಿರುವುದು ಒಳ್ಳೆಯ ಬೆಳವಣಿಗೆಯಲ್ಲ.

ಇನ್ನೊಂದೆಡೆ ನಮ್ಮ ಶಿಕ್ಷಣ ಪದ್ಧತಿ ಸರಿ ಇಲ್ಲ ಎಂದು ದೂರುವ ಒಂದು ವರ್ಗವನ್ನೂ ನಾವು ಕಾಣುತ್ತೇವೆ. ಹಾಗಾದರೆ ಇಂದಿನ ಶಿಕ್ಷಣ ವ್ಯವಸ್ಥೆಯ ಚೌಕಟ್ಟಿನ ಪರಿಮಿತಿಯಲ್ಲಿ ನಮ್ಮ ಮಕ್ಕಳು ಸುಸಂಸ್ಕೃತ ನಾಗರಿಕರಾಗಿ ತಯಾರಾಗಿ ಅರ್ಥಪೂರ್ಣ ಜೀವನ ನಡೆಸಲು ಸಾಧ್ಯವಾಗುವಂತೆ ತಯಾರುಮಾಡಲು ಸಾಧ್ಯವೇ? ಈ ಹಿನ್ನೆಲೆಯನ್ನು ಮನದಲ್ಲಿಟ್ಟುಕೊಂಡು ಒಂದಿಷ್ಟು ಚಟುವಟಿಕೆಗಳನ್ನು ನಮ್ಮ ಮಕ್ಕಳ ಶಾಲಾಶಿಕ್ಷಣದ ಜೊತೆಗೆ ಜೋಡಿಸಿಕೊಳ್ಳಬಹುದು.

- ಪ್ರತಿ ತಿಂಗಳು ಒಂದೆರಡು ಒಳ್ಳೆಯ ಪುಸ್ತಕ ಓದುವುದು. ಕೊಂಡು ಓದುವುದು ಎಲ್ಲರಿಗೂ ಸಾಧ್ಯವಾಗದಿರಬಹುದು. ನಮ್ಮ ಊರುಗಳಲ್ಲಿನ ಗ್ರಂಥಾಲಯಗಳನ್ನು ಗುರುತಿಸಿಕೊಂಡು ಅಲ್ಲೊಂದು ಸದಸ್ಯತ್ವ ಪಡೆದು ಜೀವನಚರಿತ್ರೆ, ವಿಜ್ಞಾನ ಸಂಶೋಧನೆ, ಪುರಾಣ ಕಥೆ, ಪ್ರವಾಸ ಕಥನ ಮೊದಲಾದ ವಿಷಯಗಳ ಪುಸ್ತಕಗಳನ್ನು ನಾವೂ ಓದಿ ಮಕ್ಕಳೂ ಓದಲು ಪ್ರೇರೇಪಿಸಿ ಮನೆಯಲ್ಲಿ ವಿಷಯದ ಚರ್ಚೆ ಮಾಡಬಹುದು. ನಾವು ತಿಳಿದುಕೊಂಡ ಹೊಸ ವಿಷಯವನ್ನು ಒಂದು ಪುಸ್ತಕದಲ್ಲಿ ಟಿಪ್ಪಣಿಯಾಗಿ ಬರೆದಿಟ್ಟರೆ, ಮುಂದೊಂದು ದಿನ ಅದೇ ವಿಷಯ ಪ್ರಯೋಜನಕ್ಕೆ ಬರಬಹುದು. ಹಾಗೂ ಹೆಚ್ಚು ಓದುವುದರಿಂದ ಭಾಷಾಶುದ್ಧಿಯು ದೊರಕುವುದು, ಶಬ್ದ ಸಂಗ್ರಹ ಬೆಳೆಯುವುದು.

> **ಮಹಾಪುರುಷರ ಕತೆ ಕೇಳಬೇಕು. ಅವರು ಅನುಭವಿಸಿದ ಕಷ್ಟಗಳನ್ನು ಸ್ಮರಿಸಬೇಕು. ಅವರಂತೆಯೇ ದೊಡ್ಡ ಸ್ತರಕ್ಕೆ ಏರಬೇಕು. ಆದರೆ ನಮ್ಮ ಮನೆಯಿಂದ ಮಹತ್ಕಾರ್ಯ ಮಾಡಲು ಯಾರಾದರೂ ಮುಂದಾಗುತ್ತಾರೆಂದರೆ ಅದಕ್ಕೆ ನಮ್ಮಿಂದಲೇ ಪ್ರತಿರೋಧ ಬರುತ್ತದೆ. 'ದೇಶಕ್ಕೆ ಮತ್ತೊಬ್ಬ ಸುಭಾಷ್ಚಂದ್ರ ಬೋಸ್, ಸ್ವಾಮಿ ವಿವೇಕಾನಂದರು ಹುಟ್ಟಿಬರುವುದಾದರೆ ಅದು ನಮ್ಮ ಮನೆಯಲ್ಲಿ ಬೇಡ ಪಕ್ಕದಮನೆಯಿಂದಲೇ ಆಗಲಿ.' ಇದೊಂದು ಸಾಮಾನ್ಯವಾಗಿ ಕಾಣಕೇಳಸಿಗುವ ಸಂಗತಿ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಮಹಾಪುರುಷನಾಗುವವನ ಹಾದಿಯಲ್ಲಿ ಕಲ್ಲು–ಮುಳ್ಳುಗಳಿಂದ ತೊಂದರೆಗಳು ಬಂದರೆ, ಅಪಜಯವಾದರೆ, ಸಮಾಜ ನೋಡುವ ತರಹವೇ ಬೇರೆ ಎಂಬ ಅಂಜಿಕೆಯನ್ನಿಟ್ಟುಕೊಂಡು ಮಗುವಿನ ಕನಸನ್ನೂ, ದೇಶದ ಅವಶ್ಯಕತೆಯನ್ನೂ ಕಡೆಗಾಣಿಸಿಬಿಡುತ್ತೇವೆ.**

- **ಬಾಯಿಪಾಠ ಅಭ್ಯಾಸ:** ಮಕ್ಕಳಿಗೆ ಅಜ್ಜ ಅಜ್ಜಿಯರು ಹಿಂದೆಲ್ಲ ಬಾಯಿಪಾಠ, ಮಗ್ಗಿ ಹೇಳಿಕೊಡುತ್ತಿದ್ದುದು ವಾಡಿಕೆ. ಸಂಜೆ ಆಡಿ ಬಂದಮೇಲೆ ಮನೆಪಾಠ, ಬಾಯಿಪಾಠ ಕಲಿಕೆಯ ಒಂದು ಭಾಗವಾಗಿತ್ತು. ಸಂವತ್ಸರಗಳು, ನಕ್ಷತ್ರಗಳು, ರಾಶಿ, ತಿಥಿಗೆ ಸಂಬಂಧಿತ ಹಬ್ಬಗಳು, ಒಂದಷ್ಟು ಶ್ಲೋಕಗಳು ಈ ಬಾಯಿಪಾಠದ ಹೂರಣ. ಇಂದಿನ ದಿನಗಳಲ್ಲಿ ಹೆಸರಾಂತ ಶಾಲೆಗೆ ಮಕ್ಕಳನ್ನು ಕಳಿಸುವುದರಿಂದ ಇದರ ಅಗತ್ಯವಿಲ್ಲವೆಂದು ಭಾವಿಸುತ್ತೇವೆ. ಆದರೆ ಈ ಪಾಠಗಳು ಶಾಲೆಯಲ್ಲೂ, ಮನೆಯಲ್ಲೂ ದೊರಕದೆ ಮಕ್ಕಳು ಸಾಂಸ್ಕೃತಿಕ, ರಾಷ್ಟ್ರೀಯ ಭಾಗಲಬ್ಧ (quotient) ದಿಂದ ದೂರವಾಗುತ್ತಿದ್ದಾರೆ. ಹಾಗೆಯೇ ಸ್ಮರಣಶಕ್ತಿ ಸದೃಢವಾಗಲು ಬಾಯಿಪಾಠ ಒಂದು ಉತ್ತಮ ಸಾಧನ.
- ನೈತಿಕ ಮೌಲ್ಯಗಳು: ಶಾಲೆಗಳಿಂದ ಕಲಿಯುವ ಪಾಠದ ಜೊತೆ ಮನುಷ್ಯ ದಿನನಿತ್ಯದಲ್ಲಿ ಹಲವಾರು ನೈತಿಕ ಸವಾಲುಗಳನ್ನು ಎದುರಿಸುತ್ತಿರುತ್ತಾನೆ. ತನ್ನ ಸುತ್ತಲಿನ ಜನರು, ಪ್ರಾಣಿ ಪಕ್ಷಿ ಜೀವಸಂಕುಲ, ಗಿಡಮರಗಳು ಪರಿಸರ ಇವುಗಳೊಂದಿಗಿನ ವ್ಯವಹಾರವನ್ನು ನಿರ್ಧರಿಸುವುದು ಇವೇ ಮೈಗೂಡಿಸಿಕೊಂಡ ನೈತಿಕ ಮೌಲ್ಯಗಳು. ಹಿಂದಿನ ದಿನಗಳಲ್ಲಿ ಅಮ್ಮ ಅಜ್ಜಿ ಶಾಲೆಯ ಮಾಸ್ತರರು ಹೇಳುವ ಕಥೆಗಳು, ಹಿತವಚನಗಳು ಮಕ್ಕಳಲ್ಲಿ ಈ ಮೌಲ್ಯಗಳನ್ನು ಕಲಿಸುತ್ತಿದ್ದವು. ಇಂದು ಕೆಲವು ಶಾಲೆಗಳಲ್ಲಿ ಕೊಂಚ ಮಟ್ಟಿಗಾದರೂ



ಇದೆಯಾದರೂ ಮಕ್ಕಳು ಅವನ್ನು ಹೇಗೆ ಗ್ರಹಿಸುತ್ತಾರೆ ಎಂದು ಯಾರೂ ಅಳೆಯುವುದಿಲ್ಲ. ಆದ್ದರಿಂದ ನಮ್ಮ ಮಕ್ಕಳ ದಿನನಿತ್ಯದ ವ್ಯವಹಾರಗಳನ್ನು ಚಿಕ್ಕಚಿಕ್ಕ ಕಾರ್ಯಗಳನ್ನು ಗಮನಿಸಿ ಸುಸಂಸ್ಕೃತ ಆಚರಣೆಯನ್ನು ತಿದ್ದಿ ರೂಢಿಸುವುದು ಮನೆಯಲ್ಲಿ ಮಾತ್ರ ಸಾಧ್ಯ.

- **ಪ್ರಯೋಗ ಶಾಲೆಗಳು, ಪ್ರವಾಸ:** ಶಾಲೆಗಳು ಶೈಕ್ಷಣಿಕ ವರ್ಷದಲ್ಲಿ ಒಂದಷ್ಟು ಪ್ರವಾಸಗಳನ್ನು ಹಮ್ಮಿಕೊಂಡಿರುತ್ತವೆ. ಶೈಕ್ಷಣಿಕ ಪ್ರವಾಸದ ಜೊತೆಗೆ ವಾರಾಂತ್ಯ, ಶಾಲಾ ರಜದಿನಗಳಂದು ವಿದ್ಯಾರ್ಥಿಗಳಿಗೆ ಸಾಮಾಜಿಕ ಸೇವಾ ಸಂಸ್ಥೆಗಳು, ಸರಕಾರಿ ಕಛೇರಿಗಳು ಕಾರ್ಯ ನಿರ್ವಹಿಸುವುದು ಹೇಗೆ ಎಂಬ ಬಗ್ಗೆ ಅರಿವು ಮೂಡಿಸುವ ಕೆಲಸವಾಗಬೇಕು. ಉದಾಹರಣೆಗೆ ಬ್ಯಾಂಕ್ ವ್ಯವಹಾರ, ಅಂಚೆ ಕಛೇರಿಗಳು ಕಾರ್ಯನಿರ್ವಹಿಸುವ ಬಗೆಯನ್ನು ತೋರಿಸಿಕೊಟ್ಟರೆ ವ್ಯವಹಾರ ಜ್ಞಾನವನ್ನು ಸುಲಭವಾಗಿ ಮಕ್ಕಳು ಕಲಿತುಕೊಳ್ಳಬಹುದು.
- ಪ್ರಚಲಿತ ವಿದ್ಯಮಾನಗಳ ಕುರಿತ ತಿಳುವಳಿಕೆ. ಹಿರಿಯರಾಗಿ ನಾವು ಒಂದು ವಾರ್ತಾಪತ್ರಿಕೆಯನ್ನು, ಸುದ್ದಿವಾಹಿನಿಯನ್ನು ಮಡಿವಂತಿಕೆಯಿಂದ ನೋಡುತ್ತೇವೆ. ಅದೇ ಅಭ್ಯಾಸ ವಿದ್ಯಾರ್ಥಿಗಳಿಗೆ ಬೇಡ. ಸಿಕ್ಕಿದ್ದೆಲ್ಲವನ್ನೂ ಓದುತ್ತಾ, ಪ್ರಚಲಿತ ವಿದ್ಯಮಾನಗಳು, ನಮ್ಮ ಸುತ್ತಲಿನ ಸಮಾಜದಲ್ಲಿನ ಒಳಿತು–ಕಡುಕುಗಳನ್ನು ಓದಿ ತಾವು ತಿಳುವಳಿಕೆಯ ಹಾದಿ ಹಿಡಿಯುತ್ತಿದ್ದಾರಾ ಎಂದು ಕೇಳಿಕೊಳ್ಳುವುದು ಪ್ರಶಂಸನೀಯ. ಅಲ್ಲದೇ ರಾಜ್ಯ, ದೇಶ, ವಿದೇಶದ ಮಾಹಿತಿಗಳನ್ನು ಕಲೆಹಾಕಿ ತಮ್ಮ ಮಿತ್ರರೊಂದಿಗೆ ಆ ವಿಷಯಗಳ ಚರ್ಚೆ ನಡೆಸುತ್ತಾ ಹೊಸ ವಿಷಯಗಳ ಬಗ್ಗೆ ತಿಳುವಳಿಕೆ ಬೆಳೆಸಿಕೊಳ್ಳುವುದರಿಂದ ನಿಸ್ಸಂದೇಹವಾಗಿ ಜ್ಞಾನದ ತಳಹದಿ ಸದೃಢಗೊಳ್ಳುತ್ತದೆ.
- ನಮ್ಮೂರು ನೆರೆಹೊರೆಯ ಕುರಿತು ಮಕ್ಕಳೂ ತಿಳಿದಿರಲಿ. ನಮ್ಮ ಮಕ್ಕಳು ಕೇವಲ ಶಾಲೆ ಓದಿಗಷ್ಟೇ ಸೀಮೀತವಾಗಿರದೇ ಎಲ್ಲರೊಡನೆ ಬೆರೆತು ಬದುಕುವಂತಾಗಬೇಕು. ಹಬ್ಬಹರಿದಿನ ಅಥವಾ ಮದುವೆ, ಸತ್ಯಾನಾರಾಯಣ ಪೂಜೆ ಕಾರ್ಯಕ್ರಮಗಳಿಗಷ್ಟೇ ಅಲ್ಲದೇ ಸಾಮಾನ್ಯ ದಿನಗಳಲ್ಲೂ ನಮ್ಮ ಬಂಧುಗಳು ಪರಿಚಯದವರ ಮನೆಗಳಿಗೆ ಹೋಗಿಬಂದು ಮಾಡುವ ಪರಿಪಾಠ ಇರಬೇಕು. ಆಗ ಮನೆಮನೆಗಳಲ್ಲಿ ಇರುವ ಭಿನ್ನ ಭಿನ್ನ ಪದ್ಧತಿಗಳು ಆಚರಣೆಗಳ ಪರಿಚಯ ಆಗುತ್ತದೆ. ಕೇವಲ ನಮ್ಮ ಜಾತಿಸಮುದಾಯ ಸಂಬಂಧಿಗಳಲ್ಲದೇ ಎಲ್ಲ ವೃತ್ತಿ ವರ್ಗದ ಸ್ನೇಹಿತರ ಮನೆಗಳಿಗೂ ಹೋಗಿಬರುವುದು ಇದ್ದರೆ ಬದುಕಿನ ವಿವಿಧತೆಗಳು ಗಮನಕ್ಕೆ ಬರುತ್ತವೆ. ಇಂತಹ ಭಿನ್ನತೆ ವಿವಿಧತೆಗಳನ್ನು ಎಳೆವೆಯಲ್ಲೇ ಕಂಡವನಿಗೆ ಎಲ್ಲವನ್ನು ಒಪ್ಪಿಕೊಳ್ಳುವ ಹಾಗೂ ಗೌರವಿಸುವ ಮಾನಸಿಕತೆ ತನ್ನಿಂದ ತಾನೆ ಬೆಳೆಯುತ್ತದೆ.
- ಮೊಬೈಲ್ ಗೇಮ್‌ಗಿಂತ ಬಯಲಿನ ಆಟ ಹೆಚ್ಚು ಉಲ್ಲಾಸ ನೀಡುತ್ತದೆ. ಮೊಬೈಲ್, ಕಂಪ್ಯೂಟರ್ ಗೇಮ್‌ಗಳು, ಕಾರ್ಟೂನ್ ಟಿವಿ

ವಾಹಿನಿಗಳು ಇಂದಿನ ಪಿಡುಗೆಂದರೆ ತಪ್ಪಲ್ಲ. ಇವುಗಳ ವ್ಯಸನ ಮಕ್ಕಳ ಬೌದ್ಧಿಕ ಅಷ್ಟೇ ಅಲ್ಲ ಶಾರೀರಿಕ ಬೆಳವಣಿಗೆಯ ಮೇಲೂ ಪರಿಣಾಮ ಬೀರುತ್ತವೆ. ಬಯಲಿನ ಆಟಗಳು ಮನಸ್ಸಿಗೆ ಆಹ್ಲಾದ ನೀಡುವುದರ ಜೊತೆಗೆ ಶರೀರಕ್ಕೆ ವ್ಯಾಯಾಮವನ್ನೂ ನೀಡುತ್ತವೆ.

- ಈಜು, ಸೈಕ್ಲಿಂಗ್, ಟ್ರೆಕ್ಕಿಂಗ್, ಓಡುವುದು ಮೊದಲಾದ ಹವ್ಯಾಸಗಳು, ಚಿತ್ರಕಲೆ ಸಂಗೀತ ಮೊದಲಾದವು ಹೊಸ ಭಾಷೆಯನ್ನು ಕಲಿಯುವುದು ಅಥವಾ ಇನ್ನು ಯಾವುದೋ ಸದಭಿರುಚಿಯ ಹವ್ಯಾಸಗಳನ್ನು ಮಕ್ಕಳು ರೂಢಿಸಿಕೊಂಡರೆ ಅವು ಬದುಕಿಗೆ ಅಗತ್ಯವಾದ ಎಷ್ಟೋ ಸಂಗತಿಗಳನ್ನು ಪರೋಕ್ಷವಾಗಿ ಕಲಿಸುತ್ತವೆ.
- ಕನ್ನಡದ ಹಿರಿಯ ಕವಿ ಜಯಂತ್ ಕಾಯ್ಕಿಣಿಯವರು ಹೇಳುವಂತೆ ಶಾಲೆಗಳಿಗೆ ಹೋಗುವ ದಾರಿಯಲ್ಲಿಯೇ ನೈಜ ಶಿಕ್ಷಣ ದೊರಕುವುದು ಎಂಬುದು ಅಕ್ಷರಶಃ ಸತ್ಯ. ಪರಿಸರವನ್ನು ಗಮನಿಸುವ ಮಾತ್ರದಿಂದಲೇ ಸಿಗುವ ಶಿಕ್ಷಣ, ಪ್ರಕೃತಿ ಕಲಿಸುವ ಪಾಠವೂ ನಮ್ಮ ಮಕ್ಕಳಿಗೆ ಸಿಗಬೇಕು.

ಒಟ್ಟಿನಲ್ಲಿ ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಮುಗಿಸಿದ್ದಕ್ಕೆ ಒಂದು ಪ್ರಮಾಣಪತ್ರವನ್ನು, ಚಿನ್ನದ ಪದಕವನ್ನು ಇಲಾಖೆಯವರು ನೀಡಬಹುದು. ಸರ್ಕಾರಗಳಿಂದ ಸನ್ಮಾನಗಳಾಗಬಹುದು. ಪತ್ರಿಕೆಗಳಲ್ಲಿ ಕೆಲದಿನ ಮಿಂಚಲೂಬಹುದು. ಆದರೆ ಇವೆಲ್ಲಕ್ಕೂ ಒಂದು ಪರಿಮಿತಿಯಿದೆ. ಶಾಲಾ ಓದು ಮುಗಿದ ನಂತರ ಇವನ್ನು ಯಾರು ನೆನಪಿನಲ್ಲಿಡುವುದಿಲ್ಲ. ಆದರೆ ಸುಸಂಸ್ಕಾರಗಳು, ಮೈಗೂಡಿಸಿಕೊಳ್ಳುವ ಮೌಲ್ಯಗಳು ತತ್‌ಕ್ಷಣಕ್ಕೆ ಯಾವುದೇ ಖ್ಯಾತಿ ಬಿರುದನ್ನು ತಂದುಕೊಡದಿದ್ದರೂ ಅರ್ಥಪೂರ್ಣ ಬದುಕನ್ನು ನಡೆಸಲು ಖಂಡಿತ ಸಮರ್ಥರನ್ನಾಗಿ ಮಾಡುತ್ತವೆ. ಸಮಾಜದ ಸುಸಂಸ್ಕೃತ ವ್ಯಕ್ತಿಯಾಗಿ ಬಾಳಲು, ದೇಶದ ಉತ್ತಮ ಪ್ರಜೆಯಾಗಿ ರೂಪಿಸಲು ಸಹಕಾರಿಯಾಗಿವೆ. ಹಾಗಾಗಿ ಶಾಲೆಗಳು ಪುನಾರಂಭಗೊಳ್ಳುವ ಈ ಹೊತ್ತಿನಲ್ಲಿ ನಮ್ಮ ಮಕ್ಕಳ ಶಿಕ್ಷಣ ಕೇವಲ ಮಾಹಿತಿ ಗಳಿಸುವ ಸಲುವಾಗಿ ಅಲ್ಲ ಮೌಲ್ಯ ಸಂಸ್ಕಾರಯುತವಾಗಿರುವಂತೆ ಪ್ರಯತ್ನಿಸುವುದು ಅಗತ್ಯವಾಗಿದೆ. ಏಕೆಂದರೆ ಸುಶಿಕ್ಷಿತ ಸುಸಂಸ್ಕೃತ ಮಕ್ಕಳೇ ನಾಳಿನ ಆಸ್ತಿ.



ಹಳ್ಳಿ-ದೇಸೀ ಗೋ ತಳಿ

**ಹೆಸರು :** ಕಾಂಗೆಯಂ / ಕೊಂಗು


**ಮೂಲ :** ತಮಿಳುನಾಡಿನ ಈರೋಡ್, ಕೊಯಮತ್ತೂರು, ಕರೂರು

**ರೂಪ :** ಎತ್ತುಗಳು ಬೂದು ಬಣ್ಣ, ಕಪ್ಪು ಮಚ್ಚೆಗಳನ್ನು ಹೊಂದಿರುತ್ತವೆ. ಹಸುಗಳು ಬಿಳಿಯ ಬಣ್ಣ ಹೊಂದಿರುತ್ತವೆ. ಕಡುಕಪ್ಪು ಬಣ್ಣದ ಕಣ್ಣುಗಳಿಂದ ತಳಿಯನ್ನು ಸುಲಭವಾಗಿ ಗುರುತಿಸಬಹುದು.

**ವಿಶೇಷತೆ :** ಎತ್ತುಗಳು ಬಲಿಷ್ಠವಾಗಿದ್ದು ಜಲ್ಲಿಕಟ್ಟು ಕ್ರೀಡೆಯ ಬಳಕೆಗಾಗಿ ಹೆಸರುವಾಸಿಯಾಗಿವೆ. ಕೃಷಿ, ಆಲೆಮನೆಗಳಲ್ಲಿ ಈ ತಳಿಯನ್ನು ವಿಶೇಷವಾಗಿ ಬಳಸಲಾಗುತ್ತದೆ.

**ಹಾಲಿನ ಪ್ರಮಾಣ :** ಒಂದು ಕರಾವಿನಲ್ಲಿ ಸರಾಸರಿ 500 – 600 ಲೀಟರ್

## ಬಿರ್ಸಾ ಮುಂಡಾ
(ನವೆಂಬರ್ 15, 1875 – ಜೂನ್ 9, 1900)



ವನವಾಸಿ ಜನಾಂಗದ ಯುವಕ ಬಿರ್ಸಾ ಮುಂಡಾ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸಿ ಬ್ರಿಟಿಷ್ ಸಾಮ್ರಾಜ್ಯಕ್ಕೆ ಸಿಂಹಸ್ವಪ್ನನಾಗಿದ್ದ. ಬಿರ್ಸಾ ಜನಿಸಿದ್ದು ನವೆಂಬರ್ 15, 1875 ರಂದು. ಆತನ ಊರು ರಾಂಚಿಯ ಉಳಿಹಾಟು. ತನ್ನ ಜನರ ಸ್ವಾತಂತ್ರಕ್ಕೆ ಕುತ್ಸಿತ ಕ್ರೈಸ್ತ ಮತಾಂತರಿಗಳ ಮತ್ತು ಅಮಾನವೀಯ ಬ್ರಿಟಿಷ್ ಆಡಳಿತದ ವಿರುದ್ಧದ ಹೋರಾಟದಲ್ಲಿ ಸೆರೆಮನೆಯಲ್ಲೇ ಜೂನ್ 9, 1900 ರಂದು ತನ್ನ ಜೀವವನ್ನು ಕಳೆದುಕೊಂಡಾಗ ಆತನಿಗೆ ಕೇವಲ 25 ವರ್ಷ.

ಅಪಾರ ಸಂಪತ್ತಿನ ಬೀಡಾಗಿದ್ದ ಭಾರತದ ಮಧ್ಯ ಭಾಗದಲ್ಲಿರುವ ಕಾಡುಗಳ ಮೇಲೆ ತಮ್ಮ ಅಧಿಕಾರ ಸ್ಥಾಪಿಸಲು ಹೊರಟ ಬ್ರಿಟಿಷರು, ಅಲ್ಲಿನ ವನವಾಸಿಗಳಿಗೆ ಕಾಡಿನ ಉತ್ಪನ್ನಗಳ ಮೇಲೆ ಯಾವುದೇ ಹಕ್ಕಿಲ್ಲ ಎಂದು ಆಜ್ಞೆ ಹೊರಡಿಸಿದರು. ಜೊತೆಗೆ ಕ್ರೈಸ್ತ ಮಿಷಿನರಿಗಳು ಮುಗ್ಧ ವನವಾಸಿಗಳ ಮತಾಂತರಿಸಲು ಹೊಂಚುಹಾಕುತ್ತಿದ್ದರು. ಭೇದಭಾವ ಎಂಬುದೇ ಗೊತ್ತಿಲ್ಲದಿದ್ದ ಈ ಜನರು, ತಮ್ಮ ಮೇಲೆ ವಿವಿಧ ದಿಕ್ಕುಗಳಿಂದ ದಾಳಿಗಳು ಮೊದಲಾದಾಗ, ತಮಗೆ ತೋಚಿದಂತೆ ಪ್ರತಿಭಟಿಸಲಾರಂಭಿಸಿದ್ದರು. ಇಂತಹ ಸಂದರ್ಭದಲ್ಲಿ ಸುಗನ ಮುಂಡಾ ಮತ್ತು ಕರ್ಮಿಹಾತು ಅವರ ಮಗನಾಗಿ ಬಿರ್ಸಾ ಮುಂಡಾ ಜನಿಸಿದ.

ಜನಪದಗಳ ಪ್ರಕಾರ ಬಿರ್ಸಾ ಬಾಲ್ಯದಲ್ಲಿ ವಾರಿಗೆಯ ಇತರೆ ಹುಡುಗರಂತೆ ಆಟವಾಡುತ್ತಾ ಕೊಳಲು ನುಡಿಸುತ್ತ ಬೊಹೊಂಡ ಕಾಡುಗಳಲ್ಲಿ ಕುರಿಕಾಯುತ್ತಿದ್ದ. ಬಡತನದ ಅಸಹಾಯಕತೆಯಿಂದ ಮಿಷಿನರಿಗಳ ದಾಳಕ್ಕೆ ಸಿಕ್ಕ ಬಿರ್ಸಾನ ತಂದೆ ತನ್ನ ಇಡೀ ಕುಟುಂಬವನ್ನು ಕ್ರೈಸ್ತಮತಕ್ಕೆ ಮತಾಂತರಗೊಳಿಸಿದ್ದ. ಈ ದೆಸೆಯಿಂದ ಬಿರ್ಸಾನಿಗೆ ಪ್ರಾಥಮಿಕ ಶಾಲೆ ತನಕ ಕ್ರಿಶ್ಚಿಯನ್ನರು ನಡೆಸುತ್ತಿದ್ದ ಶಾಲೆಗಳಲ್ಲಿ ವಿದ್ಯೆ ಪಡೆಯುವ ಅವಕಾಶ ಸಿಕ್ಕಿತ್ತು. ಆಗ ಬಿರ್ಸಾನಿಗೆ 13 ವರ್ಷ ವಯಸ್ಸೂ ಆಗಿರಲಿಲ್ಲ. ಧರ್ಮ ಪ್ರಚಾರಕರು ತಮ್ಮ ಮತದ ಶ್ರೇಷ್ಠತೆಯನ್ನು ಕೊಂಡಾಡುತ್ತಲೇ ವನವಾಸಿಗಳ ಸಂಸ್ಕೃತಿಯನ್ನು ಹೀಗಳೆಯುವುದನ್ನು ಕೇಳಿದಾಗ ಒಳಗೊಳಗೇ ಆಕ್ರೋಶಗೊಳ್ಳುತ್ತಿದ್ದ. ಮತ್ತೊಂದೆಡೆ ಬಿಳಿಯರ ಕಾನೂನುಗಳು ಮತ್ತು ಕಪಟತನಗಳ ನಡುವೆ ತನ್ನ ಜನ ತಮ್ಮ ಭೂಮಿಗಳನ್ನು ಕಳೆದುಕೊಂಡು ದಿನಗೂಲಿಗಳಾಗುತ್ತಿರುವುದನ್ನು ನೋಡಿ ಆತಂಕಗೊಂಡಿದ್ದ.

ಬಿರ್ಸಾ ಮತ್ತು ಆತನ ಇಡೀ ಕುಟುಂಬ ಕ್ರೈಸ್ತಮತವನ್ನು ತಿರಸ್ಕರಿಸಿ ವನವಾಸಿ ಸಂಸ್ಕೃತಿಗೆ ಮರಳಿತು. ಆ ಹೊತ್ತಿಗೆ ಬಿರ್ಸಾ 17ವರ್ಷ ವಯಸ್ಸಿನ ಆಕರ್ಷಕ ಯುವಕನಾಗಿದ್ದ. ತನ್ನ ವನವಾಸಿ ಸಮುದಾಯದಲ್ಲಿ ಸಾಮಾಜಿಕ ನ್ಯಾಯ, ಸಾಂಸ್ಕೃತಿಕ ಪುನರುಜ್ಜೀವನ ಮತ್ತು ಧಾರ್ಮಿಕ ಬದಲಾವಣೆಗಳನ್ನು ತರಲು ಯತ್ನಿಸಿದ. ಬ್ರಿಟಿಷರ ಮತ್ತು ಮತಾಂತರಿ ಚರ್ಚಿನ ವಿರುದ್ದದ ಹೋರಾಟಕ್ಕೆ ತನ್ನ ಜನರಲ್ಲಿ ಹೊಸ ಚೈತನ್ಯ ಮೂಡಿಸಲು ಪ್ರಕೃತಿ ಕೇಂದ್ರಿತ ಆರಾಧನಾ ಪದ್ಧತಿಯನ್ನು ಪ್ರಚುರಪಡಿಸಿದ. ಇದರಲ್ಲಿ ಪ್ರಕೃತಿಯೇ ದೇವರೆಂದೂ, ಸಮಾನ ಸಮಾಜವೇ ನೀತಿಯೆಂದು ಹೇಳುವುದರ ಜೊತೆಗೆ, ಸುಳ್ಳು, ವ್ಯಭಿಚಾರ, ಕಳ್ಳತನ, ಭಿಕ್ಷಾಟನೆ, ಕಪಟತನ, ಸ್ವಾರ್ಥಗಳು ನಿಷೇಧ ಎಂದು ಘೋಷಿಸಿದ.

1899ರಲ್ಲಿ ಬಿರ್ಸಾನ ಸ್ವಾತಂತ್ರ್ಯ ಹೋರಾಟ ಮತ್ತಷ್ಟು ತೀವ್ರವಾಯ್ತು. ಕುಂತಿ, ಒಮರ್, ಬಸಿಯ, ರಾಂಚಿ ಇತ್ಯಾದಿ ಕಡೆಗಳಲ್ಲಿ ಬ್ರಿಟೀಷ್ ಪೋಲಿಸ್ ಠಾಣೆಗಳ ಮೇಲೆ ದಾಳಿಗಳಾದವು. 8 ಬ್ರಿಟಿಷ್ ಪೋಲೀಸರು ಕೊಲ್ಲಲ್ಪಟ್ಟು, 32ಜನ ಪರಾರಿಯಾದರು. ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸಿಸುತ್ತಿದ್ದ ಬಿಳಿಯರು ತಮ್ಮ ಪ್ರಾಣಕ್ಕೆ ಹೆದರಿ ಅಲ್ಲಿಂದ ಓಡಿ ಹೋದರು. 89 ಭೂಮಾಲೀಕರ ಮನೆಗಳು ಬೂದಿಯಾದವು. ಚರ್ಚ್ ಮತ್ತು ಬ್ರಿಟಿಷರ ಆಸ್ತಿಗಳಿಗೆ ಬೆಂಕಿಬಿದ್ದವು. ವನವಾಸಿಗಳ ಬಂಡಾಯ ಎಷ್ಟು ತೀವ್ರಗೊಂಡಿತ್ತೆಂದರೆ ರಾಂಚಿಯ ಜಿಲ್ಲಾಧಿಕಾರಿಗೆ ಅದನ್ನು ತಡೆಯಲಾಗದೆ, ಕೊನೆಗೆ ಸೆನ್ಯಕ್ಕೇ ಬರ ಹೇಳಿದ.

ಬ್ರಿಟಿಷರ ಸೈನ್ಯ ರಾಂಚಿಗೆ ಆಗಮಿಸಿತು. ಅವರ ಬಂದೂಕುಗಳ ಮುಂದೆ ವನವಾಸಿಗಳ ಸೈನ್ಯದ ಬಿಲ್ಲುಬಾಣಗಳು ಯಾವ ಲೆಕ್ಕಕ್ಕೂ ಇರಲಿಲ್ಲ. 1899ರ ಮಾರ್ಚ್ ತಿಂಗಳಿನಲ್ಲಿ ಚಕ್ರ ಧರ್ಫುರ್ ಎಂಬ ಕಾಡಿನಲ್ಲಿ ಬಿರ್ಸಾ ನಿದ್ರಿಸುತ್ತಿದ್ದಾಗ ಆತನನ್ನು ಬ್ರಿಟಿಷರು ಬಂಧಿಸಿದರು. 1900ರ ಜೂನ್ 9ರಂದು ಬಿರ್ಸಾ ಜೈಲಿನಲ್ಲೇ ಕೊನೆಯುಸಿರೆಳೆದ. ದೇಶದ ಎಲ್ಲೆಡೆ ಸ್ವಾತಂತ್ರ್ಯದ ಬಯಕೆಗೆ ಹುಟ್ಟುವ ಮೊದಲು ವನವಾಸಿಗಳಲ್ಲಿ ಸ್ವಾಭಿಮಾನದ ಕೆಚ್ಚು ಹೊತ್ತಿಸಿದ್ದ ಬಿರ್ಸಾ ಮುಂಡಾ. ಇಂದು ಸಂಸತ್ತಿನ ಕೇಂದ್ರ ಸಭಾಂಗಣದಲ್ಲಿ ಬಿರ್ಸಾನ ಛಾಯಾಚಿತ್ರ ನೇತಾಡುತ್ತಿದೆ, ಈ ಗೌವರಕ್ಕೆ ಪಾತ್ರನಾದ ಏಕೈಕ ಬುಡಕಟ್ಟು ನಾಯಕ ಬಿರ್ಸಾ.

# ಸಾವಯವ ಕೃಷಿಯಲ್ಲಿ ಸಿರಿಧಾನ್ಯಗಳ ಸಮೃದ್ಧ ಬೆಳೆ

ನೆಲದ ಮಾತು

ಕಳೆದ 10 ವರ್ಷಗಳಿಂದ ಸಾವಯವ ಕೃಷಿ ಪದ್ಧತಿಯಲ್ಲಿ ಸಿರಿಧಾನ್ಯಗಳನ್ನು ಬೆಳೆದು ಯಶಸ್ಸು ಸಾಧಿಸಿದ್ದಾರೆ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಹೊನ್ನೂರು ಗ್ರಾಮದ ಪ್ರಗತಿಪರ ರೈತ ಶ್ರೀ ಪ್ರಕಾಶ್. ಕೃಷಿ ಮೇಲಿನ ಆಸಕ್ತಿಯಿಂದ ಪದವಿ ವ್ಯಾಸಂಗ ಮಾಡುವಾಗಲೇ ಓದಿಗೆ ವಿದಾಯ ಹೇಳಿ ತಂದೆಯೊಂದಿಗೆ ಕೃಷಿಯಲ್ಲಿ ತೊಡಗಿಸಿಕೊಂಡ ಪ್ರಕಾಶ್ ಈಗ ಓರ್ವ ಮಾದರಿ ರೈತ ಎನಿಸಿದ್ದಾರೆ.



ಹೊನ್ನೂರು ಪ್ರಕಾಶ್‌ಗೆ ತಂದೆ ಕಡೆಯಿಂದ ಪಿತ್ರಾರ್ಜಿತವಾಗಿ ಬಂದಿದ್ದು 12 ಎಕರೆ ಜಮೀನು. ಆದರೆ, ಕೃಷಿಯಲ್ಲಿ ಅವರಿಗಿರುವ ಪ್ರೀತಿ ಮತ್ತು ಆಸಕ್ತಿಯಿಂದ 8 ಎಕರೆ ಜಮೀನನ್ನು ಗುತ್ತಿಗೆಯಾಗಿ ಪಡೆದು, ಒಟ್ಟು 20 ಎಕರೆ ಜಮೀನಿನಲ್ಲಿ ಸಾವಯವ ಪದ್ಧತಿಯಲ್ಲಿ ವ್ಯವಸಾಯ ಮಾಡುತ್ತಿದ್ದು ಸಿರಿಧಾನ್ಯಗಳೇ ಅವರ ಪ್ರಮುಖ ಬೆಳೆಯಾಗಿವೆ.

ದೇಹದ ಆರೋಗ್ಯಕ್ಕೆ ಶಕ್ತಿನೀಡುವ ಈ ಧಾನ್ಯಗಳನ್ನು ಬೆಳೆಯುವುದು ತೀರಾ ಅಪರೂಪ. ಆದರೆ ಪ್ರಕಾಶ್ ಮಾತ್ರ ಸಿರಿಧಾನ್ಯ ಬೆಳೆಗಳಿಗೆ ಹೆಚ್ಚಿನ ಒತ್ತು ನೀಡುತ್ತಾರೆ. ನವಣೆ, ಬರಗು, ಆರ್ಕ, ಸಾಮೆ, ಕೊರ್ಲೆ, ಊದಲು ಸಿರಿಧಾನ್ಯವನ್ನು ಬೆಳೆಯುವ ಪ್ರಕಾಶ್, ಕಬ್ಬು, ಬಾಳೆ ಕೂಡ ಬೆಳೆಯುತ್ತಾರೆ. ಜೊತೆಗೆ ಕನಕಾಂಬರ ಮತ್ತು ಸುಗಂಧರಾಜ ಹೂವುಗಳು, ಹಿಪ್ಪು ನೇರಳೆ, ಟೊಮ್ಯಾಟೊ ಸಹ ಬೆಳೆಯುತ್ತಿದ್ದು ನಿರಂತರ ಆದಾಯಕ್ಕಾಗಿ ಮಿಶ್ರ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ. ಜಮೀನಿನ ಸುತ್ತಲೂ ತೆಂಗಿನ ಮರಗಳನ್ನು ಬೆಳೆಸಿದ್ದಾರೆ. ಬೇಸಾಯದ ಜೊತೆಗೆ ಹೈನುಗಾರಿಕೆಯಲ್ಲೂ ತೊಡಗಿಸಿಕೊಂಡಿದ್ದು ಗೀರ್, ಹಳ್ಳಿಕಾರ್, ಬರಗೂರು ತಳಿಯ ಹಸುಗಳನ್ನು ಸಾಕುತ್ತಿದ್ದಾರೆ.

ಅನ್ನ ನೀಡುವ ಭೂಮಿಗೆ ರಾಸಾಯನಿಕ ಗೊಬ್ಬರ ಹಾಕಿದರೆ ಭೂಮಿಯ ಫಲವತ್ತತೆ ಹಾಳಾಗುತ್ತದೆ. ಭೂಮಿಯಲ್ಲಿರುವ ಜೀವ ಸತ್ವಗಳು ಸತ್ತು ಹೋಗುತ್ತದೆ ಎನ್ನುವ ಕಾರಣದಿಂದ ಜಮೀನಿಗೆ ರಾಸಾಯನಿಕ ಗೊಬ್ಬರವನ್ನಾಗಲಿ ಅಥವಾ ಔಷಧವನ್ನಾಗಲಿ ಬಳಸುವುದಿಲ್ಲ. ಬದಲಾಗಿ ನೈಸರ್ಗಿಕ ಗೊಬ್ಬರ ಹಾಗೂ ಜೀವಾಮೃತ ಗೊಬ್ಬರ ತಯಾರಿಸಿ ಭೂಮಿಗೆ ಹಾಕುತ್ತಾರೆ. 100 ಲೀಟರ್ ನೈಸರ್ಗಿಕ ಗೊಬ್ಬರ ತಯಾರಿಗೆ ಒಂದು ಕೆ.ಜಿ.ಹುಣಸೆ ಸೊಪ್ಪು, ಅವರಿಕೆ ಸೊಪ್ಪು, ಕರಿಬೇವು, ಎಕ್ಕದ ಸೊಪ್ಪು, ದತ್ತೂರಿಗಿಡ, ಎಲ್ಲ ಬಗೆಯ ಹಣ್ಣುಗಳು ಹಾಗೂ ಎಲ್ಲ ಬಗೆಯ ಹೂಗಳೊಂದಿಗೆ ಬದನೆಕಾಯಿಯನ್ನು ಕತ್ತರಿಸಿಕೊಂಡು ಒಂದು ಡ್ರಮ್‌ಗೆ ಹಾಕಿ ನೀರು ತುಂಬಿಸಿ 5 ದಿನ ಬಿಟ್ಟರೆ ನೈಸರ್ಗಿಕ ಗೊಬ್ಬರ ತಯಾರಾಗುತ್ತದೆ. ಬಳಿಕ ಆ ಗೊಬ್ಬರವನ್ನು ಜಮೀನುಗಳಿಗೆ ಹಾಕಿದರೆ ಉತ್ತಮ ಇಳುವರಿ ಸಿಗುತ್ತದೆ. ಹಾಗೆಯೇ ಒಂದು ಎಕರೆ ಜಮೀನಿಗೆ, ಒಂದು ತಿಂಗಳ ಅವಧಿಗೆ 200 ಲೀಟರ್ ಜೀವಾಮೃತದ ಗೊಬ್ಬರ ಬೇಕಾಗುತ್ತದೆ. 10 ಕಿಲೋ ಸಗಣಿ, 10 ಲೀಟರ್ ದೇಸೀ ಹಸುವಿನ ಮೂತ್ರ, 2 ಕಿಲೋ ದ್ವಿದಳ ಧಾನ್ಯದ ಹಿಟ್ಟು, 2 ಕಿಲೋ ಬೆಲ್ಲ ಮತ್ತು ಯಾವ ಜಮೀನಿಗೆ ಗೊಬ್ಬರ ಹಾಕುತ್ತೇವೋ ಅದೇ ಜಮೀನಿನ 2 ಹಿಡಿ ಮಣ್ಣನ್ನು ಒಂದು ಡ್ರಮ್ ಹಾಕಿ 4 ದಿನ ಕೊಳೆಸಲಾಗುತ್ತದೆ. ಬಳಿಕ ಕೊಳೆತ ಗೊಬ್ಬರವನ್ನು ಜಮೀನಿಗೆ ಹಾಕಿದರೆ ಉತ್ತಮ ಇಳುವರಿ ದೊರೆಯುತ್ತದೆ.

ಆಧುನಿಕ ಕೃಷಿ ಪದ್ಧತಿಯಿಂದ ಭೂಮಿ ಫಲವತ್ತತೆ ಕಳೆದುಕೊಳ್ಳುತ್ತಿದೆ. ಅಧಿಕ ರಾಸಾಯನಿಕ ವಸ್ತುಗಳ ಬಳಕೆಯಿಂದ ಭೂಮಿಯಲ್ಲಿರುವ ರೈತ ಸ್ನೇಹಿ ಜೀವಿಗಳು ಸಾಯುತ್ತಿವೆ. ತಿನ್ನುವ ಅನ್ನ ವಿಷವಾಗುತ್ತಿದೆ. ರೈತರು ಇನ್ನಾದರೂ ಎಚ್ಚೆತ್ತುಕೊಳ್ಳಬೇಕು. ಪಾರಂಪರಿಕ ಸಾವಯವ ಕೃಷಿಯೆಡೆಗೆ ರೈತರು ಮರಳಬೇಕು ಎನ್ನುತ್ತಾರೆ ಸಿರಿಧಾನ್ಯ ಕೃಷಿಕ ಶ್ರೀ ಹೊನ್ನೂರು ಪ್ರಕಾಶ್.

(ಕೃಪೆ: ವಿಜಯವಾಣಿ)

**ಸಂಪಾದಕೀಯ ಸಹಕಾರ** ಸತ್ಯನಾರಾಯಣ ಶಾನಭಾಗ್, ಶೈಲೇಶ್ ಕುಲಕರ್ಣಿ, ಪ್ರವೀಣ್ ಪಟವರ್ಧನ್, ಶ್ರೀವತ್ಸ, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

ವಿಶ್ವ ಬ್ಯಾಂಕ್ ಬಿಡುಗಡೆ ಮಾಡಿದ ಪ್ರಸಕ್ತ ವರ್ಷದ 'ವಿದ್ಯುತ್ ಲಭ್ಯತೆ' ಶ್ರೇಯಾಂಕದಲ್ಲಿ ಭಾರತ 26ನೇ ಸ್ಥಾನಕ್ಕೇರಿದೆ. 2014ರಲ್ಲಿ 99ನೇ ಸ್ಥಾನದಲ್ಲಿದ್ದ ಭಾರತ 73 ಸ್ಥಾನ ಮೇಲಕ್ಕೇರಿದೆ. ಪ್ರಧಾನಿ ಮೋದಿ ಕನಸಿನಂತೆ ಪ್ರತೀ ಮನೆಗೂ ವಿದ್ಯುತ್ ಸಂಪರ್ಕ ಒದಗಿಸುವ ಕೆಲಸ ತ್ವರಿತ ಗತಿಯಲ್ಲಿ ನಡೆಯುತ್ತಿರುವುದೇ ಇದಕ್ಕೆ ಕಾರಣ, ಮೂಲ ವೇಳಾಪಟ್ಟಿಗಿಂತ 3 ವರ್ಷ ಮೊದಲೇ ಅಂದರೆ 2018ರ ವೇಳೆಗೆ ಪ್ರತಿ ಮನೆಗೂ ವಿದ್ಯುತ್ ಸೌಕರ್ಯ ದೊರೆಕಿಸಲಾಗುವುದು ಎಂದು ಕೇಂದ್ರ ವಿದ್ಯುತ್ ಖಾತೆ ಸಚಿವ ಪೀಯುಶ್ ಗೋಯಲ್ ತಿಳಿಸಿದ್ದಾರೆ.

**ಬಾಲಿವುಡ್ ನಟ ವಿವೇಕ್ ಒಬೆರಾಯ್ ಒಡೆತನದ ಕರ್ಮ ಇನ್‌ಫ್ರಾಸ್ಟ್ರಕ್ಚರ್ ವಿವಿಧ ಕಾರ್ಯಾಚರಣೆಗಳಲ್ಲಿ ಹುತಾತ್ಮರಾದ ಕೇಂದ್ರ ಮೀಸಲು ಪೋಲೀಸ್ ಪಡೆಗೆ (ಸಿಆರ್‌ಪಿಎಫ್) ಸೇರಿದ 25 ಯೋಧರ ಕುಟುಂಬಗಳಿಗೆ ಮಹಾರಾಷ್ಟ್ರದ ಥಾಣೆಯಲ್ಲಿ ನಿರ್ಮಿಸಲಾದ ವಸತಿಗೃಹಗಳನ್ನು (ಫ್ಲ್ಯಾಟ್) ನೀಡಿದ್ದಾರೆ. ಇತ್ತೀಚೆಗೆ ಛತ್ತೀಸ್‌ಗಢ್‌ದ ಸುಕ್ಮಾದಲ್ಲಿ ಮಾವೋವಾದಿಗಳ ಜೊತೆಗೆ ಹೋರಾಟದಲ್ಲಿ ಹುತಾತ್ಮರಾದ 12 ಸಿಆರ್‌ಪಿಎಫ್ ಯೋಧರ ಪರಿವಾರಗಳಿಗೆ ಇನ್ನೋರ್ವ ನಟ ಅಕ್ಷಯ ಕುಮಾರ್ ಪ್ರತಿ ಕುಟುಂಬಕ್ಕೆ 9ಲಕ್ಷದಂತೆ ಒಟ್ಟೂ 1.08 ರೂಗಳನ್ನು ನೀಡಿದ್ದರು. ಹಾಗೆಯೇ ಖ್ಯಾತ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಸುಕ್ಮಾ ಹುತಾತ್ಮ ಕುಟುಂಬಗಳಿಗೆ ತಲಾ 50 ಸಾವಿರ ರೂಪಾಯಿ ಧನ ಸಹಾಯ ಮಾಡಿದ್ದಾರೆ.**

ಆರ್ಥಿಕ ವರ್ಷ 2016–17ರಲ್ಲಿ 91 ಲಕ್ಷ ಹೊಸ ತೆರಿಗೆದಾರರಿಂದ ಸರ್ಕಾರಕ್ಕೆ ನೇರ ತೆರಿಗೆ ಸಂದಾಯವಾಗಿದೆ. ಪ್ರತಿವರ್ಷ ಏರಿಕೆಯಾಗುತ್ತಿದ್ದ ತೆರಿಗೆದಾರರ ಸಂಖ್ಯೆಗಿಂತ 80% ಹೆಚ್ಚಳ ಈ ವರ್ಷದಲ್ಲಾಗಿರುವುದಕ್ಕೆ ಮುಖ್ಯ ಕಾರಣ ನವೆಂಬರ್ ತಿಂಗಳಿನಲ್ಲಿ 500 ಹಾಗೂ 1000 ಮುಖಬೆಲೆಯ ನೋಟುಗಳನ್ನು ರದ್ದುಗೊಳಿಸಿದ್ದು ಎನ್ನಲಾಗಿದೆ. ಇದರ ಜೊತೆಗೆ ಆಪರೇಷನ್ ಕ್ಲೀನ್ ಮನಿ ಎಂಬ ಹೆಸರಿನ ಅಂತರ್ಜಾಲ ಪೋರ್ಟಲ್‌ನ್ನು ಹಣಕಾಸು ಸಚಿವಾಲಯ ಆರಂಭಿಸಿದ್ದು ಇದು ಆದಾಯದ ಸರಿಯಾದ ಮಾಹಿತಿ ಘೊಷಿಸದೇ ದೊಡ್ಡ ಪ್ರಮಾಣದ ಠೇವಣಿ ಮತ್ತು ಖರ್ಚನ್ನು ಮಾಡಿದವರನ್ನು ಗುರುತಿಸಲಿದೆ. ತೆರಿಗೆ ವಂಚನೆ ಮತ್ತು ಕಪ್ಪು ಹಣದ ವಿರುದ್ಧ ಹೋರಾಟದಲ್ಲಿ ಮೊದಲ ಕಂತಿನಲ್ಲಿ 18ಲಕ್ಷ ಇಂತಹ ವ್ಯಕ್ತಿಗಳನ್ನು ಗುರುತಿಸಿಲಾಗಿದೆ.

**ಇತ್ತೀಚೆಗೆ ಮೃತರಾದ ಕೇಂದ್ರ ಪರಿಸರ ಖಾತೆ ಸಚಿವ ಅನಿಲ್ ಮಾಧವ ದವೆ ತನ್ನ ಮರಣದ ನಂತರ "ನನ್ನ ನೆನಪು ಉಳಿಸಬೇಕೆಂದು ನೀವು ಬಯಸಿದ್ದರೆ ಗಿಡಗಳನ್ನು ನೆಡಿರಿ, ಜಲಸಂರಕ್ಷಣೆಯ ಕಾರ್ಯ ಮಾಡಿರಿ." ಎಂದು ಮೃತ್ಯುಪತ್ರದಲ್ಲಿ ಬರೆದಿದ್ದರು. ಹಾಗೆಯೇ ತನ್ನ ಹೆಸರಿನಲ್ಲಿ ಯಾವುದೇ ಸ್ಮಾರಕ, ಸ್ಪರ್ಧೆ, ಪ್ರಶಸ್ತಿ ನಡೆಸಬಾರದು ಎಂದೂ ಹೇಳಿದ್ದರು. 60 ವರ್ಷದ ಅವಿವಾಹಿತ ಅನಿಲ್ ದವೆ ನರ್ಮದಾ ಸಮಗ್ರ ಎನ್ನುವ ಹೆಸರಿನ ಸಂಘಟನೆ ಸ್ಥಾಪಿಸಿ ನದಿ ಸಂರಕ್ಷಣಾ ಕಾರ್ಯದಲ್ಲಿ ಬಹಳ ವರ್ಷಗಳಿಂದ ತೊಡಗಿದ್ದರು. ನರ್ಮದಾ ನದಿಯ ಬಗ್ಗೆ ಅಪಾರ ಪ್ರೀತಿ ಆದರಗಳನ್ನು ಹೊಂದಿದ್ದ ಅವರು ಸಾಧ್ಯವಾದಲ್ಲಿ ನರ್ಮದೆಯ ತಟದಲ್ಲಿ ವೈದಿಕ ವಿಧಿಗಳ ಪ್ರಕಾರ ಅಂತ್ಯಸಂಸ್ಕಾರ ನಡೆಸಿ ಎಂದೂ ಬರೆದಿದ್ದರು. ಆರೆಸ್ಸೆಸ್‌ನ ಸ್ವಯಂಸೇವಕರಾಗಿ ಸಾಮಾಜಿಕ ಜೀವನಕ್ಕೆ ಕಾಲಿಟ್ಟ ದವೆ ಪರಿಸರದ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು, ಅವರ ಭೋಪಾಲ್ ನಿವಾಸದ ಹೆಸರು 'ನದೀ ಕಾ ಘರ್'.**

ಅಣು ವಿದ್ಯುತ್ ಉತ್ಪಾದನಾ ತಂತ್ರಜ್ಞಾನಕ್ಕಾಗಿ ವಿದೇಶೀ ಸಹಕಾರದ ಮೇಲೆ ಅವಲಂಬನೆಯನ್ನು ಕಡಿಮೆ ಮಾಡುವ ದೃಷ್ಟಿಯಿಂದ 10 ಪ್ರೇಶರೈಸ್ಡ್ ಹೆವಿ ವಾಟರ್ ಅಣು ರಿಯಾಕ್ಟರ್‌ಗಳನ್ನು ಸ್ವದೇಶಿ ತಂತ್ರಜ್ಞಾನದಲ್ಲಿ ನಿರ್ಮಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಪ್ರತಿ ಅಣು ರಿಯಾಕ್ಟರ್ 700 ಮೆಗಾ ವ್ಯಾಟ್ ಸಾಮರ್ಥ್ಯ ಹೊಂದಲಿದೆ. ಒಟ್ಟೂ 7000 ಮೆಗಾವ್ಯಾಟ್ ಸಾಮರ್ಥ್ಯ ಹೊಂದಲಿರುವ 70 ಸಾವಿರ ಕೋಟಿ ರೂಪಾಯಿ ವೆಚ್ಚದ ಈ ಯೋಜನೆ ದೇಶೀಯ ಅಣುತಂತ್ರಜ್ಞಾನ ಮತ್ತು ಕೈಗಾರಿಕೆಗೆಗಳಿಗೆ ಬಲ ನೀಡಲಿದ್ದು ಅಣುವಿದ್ಯುತ್ ಉತ್ಪಾದನೆಯ ಕ್ಷೇತ್ರದಲ್ಲಿ ಭಾರತದ ಪ್ರಗತಿಗೆ ಒತ್ತು ನೀಡಲಿದೆ. ಪ್ರಸ್ತುತ ದೇಶದಲ್ಲಿ 6780 ಮೆಗಾವ್ಯಾಟ್ ಸಾಮರ್ಥ್ಯದ ಅಣುರಿಯಾಕ್ಟರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ನಿರ್ಮಾಣ ಹಂತದಲ್ಲಿರುವ 6700 ಮೆಗಾವ್ಯಾಟ್ ಸಾಮರ್ಥ್ಯದ ರಿಯಾಕ್ಟರ್‌ಗಳು 2021–22ರ ವೇಳಗೆ ಕಾರ್ಯಾರಂಭ ಮಾಡಲಿವೆ.

**ದೇಶದಲ್ಲೇ ಮೊದಲ ಬಾರಿಗೆ ತಾಯಿಯ ಗರ್ಭಾಶಯವನ್ನು ಮಗಳಿಗೆ ಕಸಿ ಮಾಡುವ ಮೂಲಕ ಪುಣೆಯ ಗ್ಯಾಲಾಕ್ಸಿ ಆಸ್ಪತ್ರೆಯ ವೈದ್ಯರು ವೈದ್ಯಕೀಯ ವಿಜ್ಞಾನದಲ್ಲಿ ಹೊಸ ಸಾಧನೆ ಮಾಡಿದ್ದಾರೆ. ಹುಟ್ಟುವಾಗಲೇ ಗರ್ಭಾಶಯ ಇರದ 21 ವರ್ಷದ ಮಗಳಿಗೆ 41 ವರ್ಷದ ತಾಯಿಯ ಗರ್ಭವನ್ನು ಕಸಿಮಾಡಲಾಗಿದ್ದು ದಾನಿ ಮತ್ತು ಫಲಾನುಭವಿ ಇಬ್ಬರು ಆರೋಗ್ಯವಾಗಿದ್ದಾರೆ, ಗರ್ಭಾಶಯ ಕಸಿಮಾಡಿಸಿಕೊಂಡ ಮಗಳು ಗರ್ಭವತಿಯಾಗಬಹುದೆಂದು ವೈದ್ಯರು ತಿಳಿಸಿದ್ದಾರೆ.**

ಅಮೇರಿಕವನ್ನು ಹಿಂದಿಕ್ಕಿ ಭಾರತ ಪುನರ್ನವೀಕರಣಗೊಳಿಸಬಲ್ಲ ಶಕ್ತಿ ಉತ್ಪಾದನೆಯಲ್ಲಿ ಹೂಡಿಕೆಗೆ ಎರಡನೇ ಅತ್ಯುತ್ತಮ ದೇಶವಾಗಿ ಹೊರಹೊಮ್ಮಿದೆ. 40 ದೇಶಗಳ ಈ ಪಟ್ಟಿಯಲ್ಲಿ ಚೀನಾ ಮೊದಲ ಸ್ಥಾನದಲ್ಲಿದೆ. ಭಾರತವು 2022ರ ವೇಳೆಗೆ 175 ಗಿಗಾವ್ಯಾಟ್‌ನಷ್ಟು ನವೀಕರಣಗೊಳಿಸಬಲ್ಲ ಶಕ್ತಿಯನ್ನು ಉತ್ಪಾದಿಸುವ ಯೋಜನೆ ಹಾಕಿಕೊಂಡಿದ್ದು, 2040ರವೇಳೆಗೆ ದೇಶದ ಒಟ್ಟೂ ಅಗತ್ಯದ ಶೇ40ರಷ್ಟು ನವೀಕರಣಗೊಳಿಸಬಲ್ಲ ಮೂಲಗಳಿಂದ ಪೋರೈಸುವ ಗುರಿ ಹೊಂದಿದೆ.

# ಸಾಲುದ್ದದ ಸುದ್ದಿಗಳು



**ಮಾಜಿ ಮಾವೋವಾದಿ ನಕ್ಸಲ್ ಉಗ್ರವಾದಿಯ ಮಗಳು 18 ವರ್ಷದೊಳಗಿನ ವಯೋಮಾನದ ರಾಷ್ಟ್ರೀಯ ವಾಲಿಬಾಲ್ ತಂಡಕ್ಕೆ ಆಯ್ಕೆಯಾಗಿದ್ದು ಚೀನಾದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಪಂದ್ಯಾವಳಿಯಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾಳೆ. ಒಡಿಸ್ಸಾದ ನಕ್ಸಲ್ ಪೀಡಿತ ಮಲ್ಕನ್‌ಗಿರಿಯ ಶಿರೀಶಾ ಕುರಮಿ ಸರ್ಕಾರಿ ಪ.ಜಾ. ಮತ್ತು ಪ.ಪಂ. ಇಲಾಖೆ ನಡೆಸುವ ಪ್ರೌಢಶಾಲೆಯಲ್ಲಿ ಓದುತ್ತಿದ್ದು ಅತ್ಯಂತ ಕಠಿಣ ಪರಿಸ್ಥಿತಿಗಳ ನಡುವೆ ರಾಜ್ಯಮಟ್ಟದ ಅನೇಕ ಪಂದ್ಯಾಟಗಳಲ್ಲಿ 10ಕ್ಕೂ ಹೆಚ್ಚು ಪದಕಗಳನ್ನು ಗೆದ್ದಿದ್ದಾಳೆ.**



ಎತ್ತುಗಳಿಂದ ಟರ್ಬೈನ್ ತಿರುಗಿಸಿ ವಿದ್ಯುತ್ ಉತ್ಪಾದನೆ ಮಾಡುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಯೋಗಗುರು ಬಾಬಾ ರಾಮ್‌ದೇವ್ ಆರಂಭಿಸಿದ ಪತಂಜಲಿ ಆಯುರ್ವೇದ ಸಂಸ್ಥೆ ಮುಂದಾಗಿದೆ. ಇದುವರೆಗಿನ ವಿನ್ಯಾಸದಲ್ಲಿ 2.5ಕಿಲೋವ್ಯಾಟ್‌ನಷ್ಟು ವಿದ್ಯುತ್ ಉತ್ಪಾದನೆ ಸಾಧ್ಯವಾಗಿದ್ದು, ಯಾವುದೇ ಆರ್ಥಿಕ ಲಾಭಕ್ಕಾಗಿ ಇದನ್ನು ನಡೆಸಲಾಗುತ್ತಿಲ್ಲ, ಎತ್ತುಗಳು ನಿರುಪಯೋಗಿ ಎಂದು ಕಸಾಯಿಖಾನೆ ಪಾಲಾಗುವುದನ್ನು ತಪ್ಪಿಸಲು ಮತ್ತು ಬಡವರು ಕೃಷಿಗಾಗಿ ಬಳಸುವ ಎತ್ತುಗಳನ್ನು ಉಪಯೋಗಿಸಿಕೊಂಡು ಬಿಡುವಿನಲ್ಲಿ ಅಗತ್ಯ ವಿದ್ಯುತ್ ಉತ್ಪಾದನೆ ಮಾಡಿಕೊಳ್ಳಲು ಸಾಧ್ಯವಾಗುವಂತೆ ತಂತ್ರಜ್ಞಾನ ವಿನ್ಯಾಸ ಮಾಡಲಾಗುತ್ತದೆ ಎಂದು ಪತಂಜಲಿ ಹೇಳಿದೆ.



**ತಮಿಳುನಾಡಿನ ಕರೂರು ಜಿಲ್ಲೆಯ ಪಲ್ಲಪಟ್ಟಿ ಎಂಬ ಚಿಕ್ಕ ಪಟ್ಟಣದ 18 ವರ್ಷ ವಯಸ್ಸಿನ ವಿದ್ಯಾರ್ಥಿ ರಿಫಾತ್ ಶಾರೂಕ್ ನಿರ್ಮಿಸಿದ ವಿಶ್ವದ ಅತ್ಯಂತ ಹಗುರ ಸ್ಪೇಸ್ ಪ್ರೋಬ್ ಉಪಗ್ರಹ ಇದೇ ಜೂನ್ 21ರಂದು ಅಮೇರಿಕದ ನಾಸಾದ ವ್ಯಾಲೊಪ್ ದ್ವೀಪ ಉಪಗ್ರಹ ಉಡಾವಣಾ ಕೇಂದ್ರದಿಂದ ಉಳಿದ ಉಪಗ್ರಹಗಳ ಜೊತೆಗೆ ಉಡಾವಣೆಗೊಳ್ಳಲಿದೆ. ನಾಸಾ ಮತ್ತು ಐ ಡೂಡಲ್ ಲರ್ನಿಂಗ್ ಎನ್ನುವ ಸಂಸ್ಥೆಗಳು ಜಂಟಿಯಾಗಿ ಆಯೋಜಿಸಿದ್ದ 'ಕ್ಯೂಬ್ ಇನ್ ಸ್ಪೇಸ್' ಹೆಸರಿನ ಸ್ಪರ್ಧೆಯಲ್ಲಿ ರಿಫಾತ್ ನಿರ್ಮಿಸಿದ ಈ ಪುಟ್ಟ ಉಪಗ್ರಹ ಆಯ್ಕೆಯಾಗಿದೆ. 64 ಗ್ರಾಮ್ ಮತ್ತು 4 ಘನ ಸೆಂಟಿಮೀಟರ್ ಗಾತ್ರದ ಈ ಸ್ಪೇಸ್ ಪ್ರೋಬ್ 240ನಿಮಿಷದ ಮಿಶನ್ ಅವಧಿ ಮತ್ತು 12 ನಿಮಿಷಗಳ ಕಕ್ಷಾ ಅವಧಿ ಇರಲಿದ್ದು ಮೈಕ್ರೋ ಗ್ರಾವಿಟಿ ವಾತಾವರಣದಲ್ಲಿ 3–ಡಿ ಮುದ್ರಿತ ಕಾರ್ಬನ್ ಎಳೆಗಳು ಹೇಗೆ ಕಾರ್ಯನಿರ್ವಹಿಸಲಿವೆ ಎಂದು ಪ್ರದರ್ಶಿಸಲಿದೆ. ಇದು ನಾಸಾದಿಂದ ಉಡಾವಣೆಗೊಳ್ಳುತ್ತಿರುವ ಭಾರತೀಯ ವಿದ್ಯಾರ್ಥಿಯೊಬ್ಬ ನಿರ್ಮಿಸಿದ ಪ್ರಥಮ ಸ್ಪೇಸ್ ಪ್ರೋಬ್ ಆಗಿದ್ದು ಇದಕ್ಕೆ ಕಲಾಮ್ ಸ್ಯಾಟ್ ಹೆಸರಿಡಲಾಗಿದೆ.**

ವಿದ್ಯುತ್ ಚಾಲಿತ ವಾಹನಗಳನ್ನು ಬಳಸುವುದರಿಮದ ಪೆಟ್ರೋಲಿಯಂ ಇಂಧನಗಳ ಲೆಕ್ಕದಲ್ಲಿ 60ಬಿಲಿಯನ್ ಡಾಲರ್‌ಗಳಷ್ಟು ಉಳಿತಾಯ ಮಾಡಬಹುದು ಮತ್ತು 2030ರೊಳಗೆ 1 ಗಿಗಾಟನ್‌ಷ್ಟು ಇಂಗಾಲ ಹೊರಸೂಸುವುದನ್ನು ತಡೆಯಬಹುದು ಎಂದು ನೀತಿ ಆಯೋಗ ತನ್ನ ವರದಿಯಲ್ಲಿ ಹೇಳಿದೆ. ಪೆಟ್ರೋಲಿಯಂ ಇಂಧನದ ಬೇಡಿಕೆಯನ್ನು



ಶೇ64ರಷ್ಟು ಇಳಿಸಬಹುದು, 156ಮಿಲಿಯನ್ ಟನ್‌ಷ್ಟು ವಾರ್ಷಿಕ ಪೆಟ್ರೋಲಿಯಂ ಇಂಧನ ಬೇಡಿಕೆ ತಗ್ಗಲಿದೆ ಎಂದು ವರದಿ ಹೇಳಿದೆ. 2030ರ ಹೊತ್ತಿಗೆ ದೊಡ್ಡ ಪ್ರಮಾಣದಲ್ಲಿ ವಾಹನಗಳು ವಿದ್ಯುತ್ ಚಾಲಿತವಾಗಿರಬೇಕೆಂಬ ಯೋಜನೆಯನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದೆ.



**ತಮಿಳುನಾಡಿನ ಕೋಯಮತ್ತೂರಿನ ಈಶಯೋಗ ಸಂಸ್ಥೆಯ ಆವರಣದಲ್ಲಿ ಸ್ಥಾಪಿತವಾದ 112ಅಡಿ ಎತ್ತರದ ಶಿವನ ಪ್ರತಿಮೆ (bust) ವಿಶ್ವದ ಅತ್ಯಂತ ದೊಡ್ಡ ಎನ್ನುವ ಖ್ಯಾತಿಗೆ ಪಾತ್ರವಾಗಿದ್ದು ಗಿನ್ನೀಸ್ ದಾಖಲೆ ಪುಸ್ತಕ ಸೇರಿದೆ. ಆದಿಯೋಗಿ ಶಿವನ ಮುಖವುಳ್ಳ ಈ ಪ್ರತಿಮೆಯನ್ನು ಇದೇ ವರ್ಷದ ಶಿವರಾತ್ರಿಯಂದು ಪ್ರಧಾನಿ ಮೋದಿ ಉದ್ಘಾಟಿಸಿದ್ದರು.**



ರಸ್ತೆ ಅಗಲೀಕರಣಕ್ಕಾಗಿ ಕೊಡಲಿಯೇಟಿನಿಂದ ಧರೆಗುರುಳುತ್ತಿದ್ದ ನಾಲ್ಕು ಅಶ್ವತ್ಥಮರಗಳನ್ನು ಆಂಧ್ರಪ್ರದೇಶದ ಶಾಸಕರೊಬ್ಬರು ಸ್ವಂತ ಖರ್ಚಿನಲ್ಲಿ ಮುತುವರ್ಜಿವಹಿಸಿ ಕಿತ್ತು ಸ್ಥಳಾಂತರಗೊಳಿಸಿದ್ದಾರೆ. ವಿಜಯವಾಡ ಮಚಲಿಪಟ್ಟಣಂ ಹೆದ್ದಾರಿ ನಿರ್ಮಾಣಕ್ಕಾಗಿ ಬಲಿಯಾಗುತ್ತಿದ್ದ ಈ ಮರಗಳನ್ನು ಉಳಿಸಿಕೊಂಡ ಆಂಧ್ರದ ವಿಜಯವಾಡ ಜಿಲ್ಲೆಯ ಶಾಸಕ ಪೆನಮಲೂರು ಬೋಡೆ ಪ್ರಸಾದ್ "ನಾನು ಸಣ್ಣವನಿದ್ದಾಗಿನಿಂದ ಈ ಮರಗಳಿದ್ದವು, ಇವುಗಳನ್ನು ಕಡಿಯಲಾಗುತ್ತದೆ ಎಂದು ಕೇಳಿದಾಗ ನನಗೆ ದುಃಖವಾಯಿತು. ಮರಗಳ ರಕ್ಷಣೆಯ ಪರ್ಯಾಯ ಪರಿಹಾರ ಇರುವುದನ್ನು ವಿಚಾರಮಾಡದೇ ಅಧಿಕಾರಿಗಳು ಮರಗಳನ್ನು ಕಡಿಯತೊಡಗುತ್ತಾರೆ" ಎನ್ನುತ್ತಾರೆ.

**ಇನ್ನೊಂದೆಡೆ ಬೆಂಗಳೂರಿನ ಸರ್ಜಾಪುರದಲ್ಲಿ ರಸ್ತೆಯ ಅಗಲೀಕರಣಕ್ಕಾಗಿ ಕಡಿಯಬೇಕಾಗಿದ್ದ ಮರಗಳ ರಕ್ಷಣೆಗಾಗಿ ನಾಗರಿಕರೇ ಒಂದಾಗಿ ಮೂರುಲಕ್ಷ ಹಣ ಸಂಗ್ರಹ ಮಾಡಿದ್ದಾರೆ. ಸರ್ಜಾಪುರ್ ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಶನ್ನಿನ ಮೂಲಕ ಆನ್‌ಲೈನ್‌ನಲ್ಲಿ ಹಣಸಂಗ್ರಹ ಮಾಡಿದ ನಾಗರಿಕರು ಮೊದಲು ಮೂರು ಮರಗಳನ್ನು ಸ್ಥಳಾಂತರಗೊಳಿಸಲು ಯೋಚಿಸಿದ್ದರು. ಜನಸ್ಪಂದನೆ ಹಾಗೂ ಉತ್ಸಾಹವನ್ನು ಕಂಡು ನಾಲ್ಕು ಮರಗಳನ್ನು ಸ್ಥಾನಾಂತರಗೊಳಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ.**

ಮದರಸಾಗಳ ಶಿಕ್ಷಣವನ್ನು ನಿಯಂತ್ರಿಸುತ್ತಿದ್ದ ಮದರಸಾ ಬೋರ್ಡ್‌ನ್ನು ವಿಸರ್ಜಿಸಲು ಆಸ್ಸಾಮ್ ಸರ್ಕಾರ ನಿರ್ಧರಿಸಿದೆ. ಇನ್ನು ಮುಂದೆ ಮದರಸಾಗಳ ಶಿಕ್ಷಣ ಸಂಭಂಧಿಸಿದ ವಿಷಯಗಳನ್ನು ರಾಜ್ಯದ ಪ್ರೌಢ ಶಿಕ್ಷಣ ಇಲಾಖೆಗೆ ಹಸ್ತಾಂತರಿಸಲಾಗುವುದು. ಇದರೊಂದಿಗೆ ಸಂಸ್ಕೃತ ಶಿಕ್ಷಣ ಬೋರ್ಡ್‌ನ ವಿಷಯಗಳನ್ನೂ ಸಹ ಶಿಕ್ಷಣ ಇಲಾಖೆಗೆ ವರ್ಗಾಯಿಸುವ ನಿರ್ಣಯ ಕೈಗೊಳ್ಳಲಾಗಿದೆ. ಕೆಲವು ತಿಂಗಳ ಹಿಂದೆ ಮದರಸಾಗಳ ಬಗ್ಗೆ ಉಲ್ಲೇಖಿಸಿದ ರಾಜ್ಯ ಶಿಕ್ಷಣ ಸಚಿವ ಹಿಮಂತ ಬಿಸ್ವ ಶರ್ಮಾ ಮದರಸಾಗಳು ಶುಕ್ರವಾರದ ಸಾಪ್ತಾಹಿಕ ರಜೆಯನ್ನು ಬದಲಾಯಿಸಿ ಉಳಿದ ಸಂಸ್ಥೆಗಳಂತೆ ಭಾನುವಾರ ರಜೆ ನೀಡಬೇಕು ಎಂದಿದ್ದರು.

ಕೃಪೆ: News13.in

## ದಾನಿಗಳ ರಕ್ತದಲ್ಲಿ ಸ್ವಾಮೀಜಿ ತುಲಾಭಾರ

ನಾಣ್ಯದಲ್ಲಿ, ತೆಂಗಿನಕಾಯಿ, ಧಾನ್ಯಗಳು ಅಷ್ಟೇ ಅಲ್ಲ ಶ್ರೀಮಂತರಾದರೆ ಒಡವೆಗಳಲ್ಲೂ ತುಲಾಭಾರ ನಡೆಸುವುದನ್ನು ನಾವು ಕೇಳಿರಬಹುದು. ಆದರೆ ಇತ್ತೀಚೆಗೆ ನಡೆದ ಅಪರೂಪದ ಘಟನೆಯಲ್ಲಿ ಹುಬ್ಬಳ್ಳಿಯ ಮೂರುಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿಯವರ ತುಲಾಭಾರವನ್ನು ದಾನಿಗಳ ರಕ್ತದಲ್ಲಿ ನೆರವೇರಿಸಲಾಯಿತು. ಹಾವೇರಿ ಜಿಲ್ಲೆಯ ಹಾನಗಲ್ಲ ತಾಲೂಕಿನ ಬೆಳಗಾಲಪೇಟ ಗ್ರಾಮದಲ್ಲಿ ನಡೆದ ದೇವಸ್ಥಾನ ಉದ್ಘಾಟನೆ ಸಮಾರಂಭದಲ್ಲಿ 141 ಜನ ದಾನಿಗಳಿಂದ ಸಂಗ್ರಹಿಸಿದ ರಕ್ತವನ್ನು ತುಲಾಭಾರಕ್ಕೆ ಬಳಸಿಕೊಳ್ಳಲಾಯಿತು. ಸ್ಥಳೀಯ ನಾಮದೇವ ಸೇವಾ ಸಂಸ್ಥೆಯು ಹುಬ್ಬಳ್ಳಿಯ ಧಾಮಜಿ ಜಾಧವಜಿ ಛಡ್ಡಾ ಸ್ಮಾರಕ ರಾಷ್ಟ್ರೋತ್ಥಾನ ರಕ್ತನಿಧಿಯ ಸಹಯೋಗದಲ್ಲಿ ರಕ್ತದಾನ ಶಿಬಿರವನ್ನು ಆಯೋಜಿಸಿತ್ತು.

पुंगव PUNGAVA
# 74, Ranga Rao Road, Shankarapuram, Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
1-6-2017



# ಪಾರದರ್ಶಕ ಚುನಾವಣೆಗೆ ಬರಲಿವೆ ವಿವಿಪ್ಯಾಟ್‌ಗಳು

ಉತ್ತರಪ್ರದೇಶ, ಉತ್ತರಾಖಂಡ ರಾಜ್ಯಗಳ ಚುನಾವಣೆಗಳ ಬಳಿಕ ಹೊಸತೊಂದು ಚರ್ಚೆ ಆರಂಭವಾಯಿತು. ಚುನಾವಣೆಗೆ ಬಳಸುವ ವಿದ್ಯುನ್ಮಾನ ಮತಯಂತ್ರಗಳ ಮೇಲೆ ಕೈಚಳಕ ನಡೆಸಿ, ಫಲಿತಾಂಶವನ್ನು ತಿರುಚಿಸಲಾಗಿದೆ ಎಂಬ ಆರೋಪಗಳು ಸೋತ ನಾಯಕರ ಬಾಯಲ್ಲಿ ಸಹಜವಾಗಿ ಉದುರತೊಡಗಿತು. ವಿದ್ಯುನ್ಮಾನ ಮತಯಂತ್ರಗಳನ್ನು ವಿರೂಪಗೊಳಿಸಲು ಸಾಧ್ಯವಿಲ್ಲ ಎಂದು ಚುನಾವಣಾ ಆಯೋಗದ ಮುಖ್ಯಸ್ಥರು ಸಮಜಾಯಿಷಿಯನ್ನು ನೀಡಿದರು. ಅಲ್ಲದೇ ಈ ಹಿಂದೆಯೂ ಮತಯಂತ್ರವನ್ನು ವಿರೂಪಗೊಳಿಸಲು ತಂತ್ರಜ್ಞರಿಗೆ, ರಾಜಕಾರಣಿಗಳಿಗೆ ಎರಡು ಬಾರಿ ಚುನಾವಣಾ ಆಯೋಗವು ಸವಾಲು ಎಸೆದಿತ್ತು. ಆಗೆಲ್ಲ ಯಾರೂ ಸವಾಲನ್ನು ಗೆದ್ದಿರಲಿಲ್ಲ. ಚುನಾವಣೆಯಲ್ಲಿ ಸೋತವರು ಆತ್ಮವಿಮರ್ಶೆ ಮಾಡುವುದನ್ನು ಬಿಟ್ಟು ಆರೋಪಿಸುವುದರಲ್ಲಿ ಕಾಲಕಳೆಯುವುದು ಇಂದು ನಿನ್ನೆಯದ್ದಲ್ಲ. ನಮ್ಮ ದೇಶದಲ್ಲಿ ಬಳಸುವ ಮತಯಂತ್ರಗಳನ್ನು ಬೇರೆ ದೇಶದ ಚುನಾವಣೆಗೆ ಬಳಸಿಕೊಳ್ಳಲು ಎರವಲು ಪಡೆಯುತ್ತಿದ್ದಾರೆ ಎಂಬ ಸುದ್ದಿಯೂ ಇದೆ.

ಹೀಗಿರುವಾಗ ಮುಂದಿನ ಚುನಾವಣೆಗಳಲ್ಲಿ ಮತ್ತೂ ಉತ್ತಮದರ್ಜೆಯ ಮತಯಂತ್ರಗಳನ್ನು ಬಳಸಲು ಚುನಾವಣಾ ಆಯೋಗ ನಿರ್ಧರಿಸಿದೆ. ಗುರುತಿಸಲ್ಪಟ್ಟ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳ ಮುಖಂಡರ ಸಭೆ ನಡೆಸಿದ ಚುನಾವಣಾ ಆಯೋಗ, ಮತಯಂತ್ರಗಳ ತಿರುಚುವಿಕೆ ಕಪೋಲ ಕಲ್ಪಿತವೆಂದೂ, ಈ ಬಗ್ಗೆ ಕೇಳಿಬಂದಿರುವ ಆರೋಪಗಳು ನಿರಾಧಾರ ಎಂದೂ ಹೇಳಿತು. ಮುಂದಿನ ಎಲ್ಲಾ ಚುನಾವಣೆಗಳಲ್ಲಿ ಬಳಸಲಾಗುವ ಹೊಸ ಮತಯಂತ್ರದ ಹೆಸರು ವಿವಿಪಿಎಟಿ ಎಂದು. Voter Verified Paper Audit Trail (VVPAT) ಹೆಸರಿನ ಮತಯಂತ್ರಗಳು ಕೇವಲ ನಾವು ಚಲಾಯಿಸುವ ಮತವನ್ನು ಎಲೆಕ್ಟ್ರಾನಿಕ್ ಮೆಮೊರಯಯೊಳಗೆ ದಾಖಲಿಸುವುದರ ಜೊತೆಗೆ, ನಾವು ಯಾರಿಗೆ ಮತ ನೀಡಿದ್ದೇವೋ ಆ ಅಭ್ಯರ್ಥಿಯ ಹೆಸರು ಮತ್ತು ಪಕ್ಷದ ಚಿನ್ಹೆಯನ್ನು ಚೀಟಿಯೊಂದರಲ್ಲಿ ಮುದ್ರಿಸಿ, ಮತದಾರನಿಗೆ ತೋರಿಸಿ ಒಂದು ಡಬ್ಬಿಯೊಳಗೆ ಸಂಗ್ರಹಿಸುತ್ತದೆ. ಮತಯಂತ್ರದಲ್ಲಿ ಗಾಜಿನಿಂದ ಮುಚ್ಚಲಾದ ಕಿಂಡಿಯಲ್ಲಿ ಈ ಚೀಟಿ 7 ಸೆಕೆಂಡುಗಳ ಕಾಲ ಮತದಾರನಿಗೆ ಕಾಣಿಸುತ್ತದೆ. ಮುಂದೊಂದು ದಿನ ತಿರುಚುವಿಕೆಯ ಆರೋಪ ಬಂದಾಗ ಈ ಮುದ್ರಿತ ಚೀಟಿಗಳನ್ನು ಎಣಿಸುವ ಮೂಲಕ ಮರು ಪರಿಶೀಲನೆ ನಡೆಸಬಹುದಾಗಿದೆ ಎಂಬುದು ಚುನಾವಣಾ ಆಯೋಗದ ಅಂಬೋಣ. ಈ ಯಂತ್ರಗಳ ಮೇಲೂ ಸಾಕಷ್ಟು ಪರೀಕ್ಷೆಗಳನ್ನು




ನಡೆಸಲಾಗಿದೆ. ಸುಮಾರು ಮೂರು ಸಾವಿರ ಕೋಟಿ ರೂಪಾಯಿ ವೆಚ್ಚದ 17 ಲಕ್ಷದಷ್ಟು ವಿವಿಪ್ಯಾಟ್ ಮತಯಂತ್ರಗಳನ್ನು ಖರೀದಿಸಲು ಕೇಂದ್ರ ಸರ್ಕಾರ ಒಪ್ಪಿಗೆಯನ್ನೂ ನೀಡಿದೆ.

# ತ್ರಿವಳಿ ತಲಾಖ್‌ನಿಂದ ಮುಕ್ತಿಗಾಗಿ ಮುಸ್ಲಿಂ ಮಹಿಳೆಯರಿಂದ ಹನುಮಾನ್ ಚಾಲೀಸಾ ಪಠಣ



ಉತ್ತರ ಪ್ರದೇಶದ ವಾರಣಾಸಿಯ ಪಟಲ್‌ಪುರಿ ಮಠದ ಆವರಣದಲ್ಲಿ ಸೇರಿದ ನೂರಕ್ಕೂ ಹೆಚ್ಚು ಮುಸ್ಲಿಂ ಮಹಿಳೆಯರು ತ್ರಿವಳಿ ತಲಾಖ್‌ನಿಂದ ಮುಕ್ತಿಗಾಗಿ ಹೊರಾಟದಲ್ಲಿ ಶಕ್ತಿ ಸಂಚಯಕ್ಕಾಗಿ ಹನುಮಾನ್ ಚಾಲೀಸಾ ಪಠಣ ನಡೆಸಿದರು. ಮುಸ್ಲಿಂ ಮಹಿಳಾ ಫೌಂಡೇಶನ್ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಹಿರಿಯ ಆರೆಸ್ಸೆಸ್ ಪ್ರಚಾರಕ ಹಾಗೂ ಮುಸ್ಲಿಂ ರಾಷ್ಟ್ರೀಯ ಮಂಚ್ ಮಾರ್ಗದರ್ಶಕ ಇಂದ್ರೇಶ್ ಕುಮಾರ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಫೌಂಡೇಶನ್ನಿನ ರಾಷ್ಟ್ರೀಯ ಸದಸ್ಯೆ ಸದರ್ ನಾಜನೀನ್ "ಜೀವನದ ಹತಾಶೇ ನಿರಾಶೆ, ಎಲ್ಲ ತರಹದ ಸಂಕಟಗಳಿಂದ ಮುಕ್ತಿ ಪಡೆಯುವ ಸಲುವಾಗಿ ಹನಿಮಾನ್ ಚಾಲೀಸಾದ ರಚನೆಯಾಗಿದೆ. ಈ ನಂಬಿಕೆಯ ಅನುಸಾರವಾಗಿ ಮುಸ್ಲಿಂ ಮಹಿಳೆಯರ ದೊಡ್ಡ ಸಂಕಟವಾದ ತ್ರಿವಳಿ ತಲಾಖ್‌ನಿಂದ ಮುಕ್ತಿ ಪಡೆಯುವ ಸಲುವಾಗಿ ಹನುಮಾನ್ ಚಾಲೀಸಾ ಪಠಣ ಕಾರ್ಯಕ್ರಮ ಆಯೋಜಿಸಲಾಗಿದೆ" ಎಂದರು.

ಎಲ್ಲೋ ಕೇಳಿದ ಕತೆ

# ಸಂತರ ಪರೀಕ್ಷೆ

ಮಹಾರಾಷ್ಟ್ರದ ಪ್ರಸಿದ್ಧ ಸಂತರಾದ ಜ್ಞಾನೇಶ್ವರ, ಮುಕ್ತಾಬಾಯಿ, ನಾಮದೇವ ಇವರೊಂದಿಗೆ ತೀರ್ಥಯಾತ್ರೆ ಮಾಡುತ್ತ ಸಂತರ ತಂಡವೊಂದು ಇನ್ನೋರ್ವ ಪ್ರಸಿದ್ಧ ಸಂತ ಗೋರಾರವರ ನಿವಾಸದ ಹತ್ತಿರ ಬಂದಿತು. ಸಂತ ಸಮಾಗಮವಾಯಿತು, ಅಧ್ಯಾತ್ಮ ಜಿಜ್ಞಾಸೆ ನಡೆಯಿತು. ಗೋರಾ ಓರ್ವ ಕುಂಬಾರರಾಗಿದ್ದರು. ಅಲ್ಲಿಯೇ ಬಳಿ ಇದ್ದ ಒಂದು ದೊಣ್ಣೆಯನ್ನು ಕಂಡು ಮುಕ್ತಾಬಾಯಿ ಕುಂಬಾರ ಗೋರಾರವರನ್ನು ಇದೇನೆಂದು ಕೇಳಿದರು. "ಈ ದೊಣ್ಣೆಯಿಂದ ಬಡಿದು ಮಡಕೆಗಳು ಬೆಂದಿವೆಯೇ ಅಥವಾ ಇನ್ನೂ ಕಚ್ಚಾ ಆಗಿವೆಯೇ ಎಂದು ನಾನು ಪರೀಕ್ಷಿಸುತ್ತೇನೆ" ಎಂದರು ಗೋರಾ. ಇದನ್ನು ಕೇಳಿ ನಕ್ಕ ಮಕ್ತಾಬಾಯಿ "ನಾವೂ ಸಹ ಮಣ್ಣಿನಿಂದ ಆದ ಮಡಕೆಗಳೇ, ಈ ದೊಣ್ಣೆಯಿಂದ ನಮ್ಮ ಪರೀಕ್ಷೆಯನ್ನೂ ಮಾಡಬಲ್ಲಿರೋ?" ಎಂದು ಕೇಳಿದರು. "ಯಾಕಿಲ್ಲ?" ಎಂದು ನಕ್ಕ ಗೋರಾ ಮೇಲೆದ್ದು ದೊಣ್ಣೆಯಿಂದ ಪ್ರತಿಯೊಬ್ಬರ ತಲೆಯನ್ನು ಕುಟ್ಟಿ ಪರೀಕ್ಷಿಸತೊಡಗಿದರು.

ಕೆಲವರಿಗೆ ಇದು ವಿನೋದವಾಗಿ ಕಂಡಿತು, ಕೆಲವರಿಗೆ ಇದರಲ್ಲಿ ಸಂತರ ಅಧ್ಯಾತ್ಮ ಗೂಢಾರ್ಥ ಕಂಡಿತು. ಆದರೆ ನಾಮದೇವರಿಗೆ ಇದು ಸರಿ ಕಾಣಲಿಲ್ಲ. ಓರ್ವ ಕುಂಬಾರ ತಲೆಯ ಮೇಲೆ ದೊಣ್ಣೆಯನ್ನು ತಟ್ಟಿ ಸಂತರ ಪರೀಕ್ಷೆ ಮಾಡುವುದೆಂದರೇನು? ಕ್ರೋಧದಿಂದ ಅವರ ಮುಖವು ಕೆಂಪಾಯಿತು. ನಾಮದೇವರ ಸರದಿ ಬಂದಾಗ ಸಂತ ಗೋರಾ ಅವರ ತಲೆಯ ಮೇಲೆ ದೊಣ್ಣೆಯನ್ನು ಕುಟ್ಟಿ "ಈ ಮಡಕೆ ಇನ್ನೂ ಕಚ್ಚಾ ಇದೆ" ಎಂದರು. ಇದನ್ನು ಕೇಳಿ ನಾಮದೇವ್ ಇನ್ನೂ ಕ್ರುದ್ಧರಾದರು. ನಂತರ ನಾಮದೇವರಲ್ಲಿ ಆತ್ಮೀಯ ಸ್ವರದಲ್ಲಿ ಮಾತನಾಡಿದ ಸಂತ ಗೋರಾ "ತಪಸ್ವಿಗಳೇ, ನೀವು ನಿಶ್ಚಯವಾಗಿ ಶ್ರೇಷ್ಠ ಸಂತರೇ ಆಗಿದ್ದೀರಿ, ಆದರೆ ನಿಮ್ಮ ಮಸ್ತಿಷ್ಕದಲ್ಲಿನ ಅಹಂಕಾರರೂಪೀ ಸರ್ಪ ಇನ್ನೂ ಸತ್ತಿಲ್ಲ. ಆದ್ದರಿಂದ ಮಾನ-ಅಪಮಾನಗಳ ಕಡೆಗೆ ನಿಮ್ಮ ಧ್ಯಾನ ಬೇಗನೆ ಸರಿದುಬಿಡುತ್ತದೆ. ಮಾನ-ಅಪಮಾನ, ನಾನೆಂಬ ಮಮಕಾರಗಳನ್ನು ಮೀರದ ಹೊರತು ಅಧ್ಯಾತ್ಮ ಜ್ಞಾನವನ್ನು ಅರಿಯುವುದು ಸಾಧ್ಯವಿಲ್ಲ" ಎಂದರು. ಇದನ್ನು ಕೇಳಿದ ನಾಮದೇವರ ಕಣ್ಣು ತೆರೆಯಿತು. ಮುಂದೆ ಸಂತ ವಿಠೋಬಾ ಖೇಚರ್‌ರಲ್ಲಿ ದೀಕ್ಷೆ ಪಡೆದ ನಾಮದೇವ ಶ್ರೇಷ್ಠ ಸಂತರಾದರು.

# ಆರೆಸ್ಸೆಸ್‌ನ ಸಂಘ ಶಿಕ್ಷಾವರ್ಗಗಳ ಸಮಾರೋಪ

ಆರೆಸ್ಸೆಸ್‌ನ ಕರ್ನಾಟಕ ಉತ್ತರ ಮತ್ತು ದಕ್ಷಿಣ ಪ್ರಾಂತಗಳ ಸಂಘ ಶಿಕ್ಷಾವರ್ಗಗಳು ಏಪ್ರಿಲ್-ಮೇ ತಿಂಗಳಿನಲ್ಲಿ ನಡೆದವು. ಈ ವರ್ಗಗಳಲ್ಲಿ ಭಾಗವಹಿಸಿದ್ದ ಶಿಕ್ಷಾರ್ಥಿಗಳ ಸಂಖ್ಯೆ ಹೀಗಿದೆ.

| ಪ್ರಾಂತ | ವರ್ಗ | ಶಿಕ್ಷಾರ್ಥಿಗಳ ಸಂಖ್ಯೆ |
|---|---|---|
| ಕರ್ನಾಟಕಉತ್ತರ | ಪ್ರಥಮ ವರ್ಷ | 315 |
| ಕರ್ನಾಟಕದಕ್ಷಿಣ | ಪ್ರಥಮ ವರ್ಷ | 653 |
| ಎರಡೂ ಪ್ರಾಂತಗಳು ಸೇರಿ | ದ್ವಿತೀಯ ವರ್ಷ | 176 |
| | **ಒಟ್ಟು** | **1144** |





ದಾವಣಗೆರೆಯಲ್ಲಿ ನಡೆದ ದಕ್ಷಿಣ ಪ್ರಾಂತದ ಮಂಗಳೂರು ಮತ್ತು ಶಿವಮೊಗ್ಗ ವಿಭಾಗಗಳ ವರ್ಗದ ಸಮಾರೋಪದಲ್ಲಿ ಚಿತ್ರದುರ್ಗದ ಮುರುಘಾಮಠದ ಶ್ರೀ ಮುರುಘಾ ಶರಣರು ಸಾನ್ನಿಧ್ಯವಿತ್ತು. ಚನ್ನೇನಹಳ್ಳಿಯಲ್ಲಿ ನಡೆದ ಮೈಸೂರು, ತುಮಕೂರು ಮತ್ತು ಬೆಂಗಳೂರು ಉತ್ತರ ಮತ್ತು ದಕ್ಷಿಣ ವಿಭಾಗಗಳ ವರ್ಗದ ಸಮಾರೋಪ ಕಾರ್ಯಕ್ರಮದಲ್ಲಿ ಖ್ಯಾತ ಹೃದ್ರೋಗ ತಜ್ಞ, ನಾರಾಯಣ ಹೃದಯಾಲಯದ ಅಧ್ಯಕ್ಷರಾದ ಶ್ರೀ ಡಾ. ದೇವಿಪ್ರಸಾದ್ ಶೆಟ್ಟಿಯವರು ಭಾಗವಹಿಸಿದ್ದರು. ಹಗರಿಬೊಮ್ಮನಹಳ್ಳಿಯಲ್ಲಿ ನಡೆದ ದ್ವಿತೀಯ ವರ್ಷ ಸಂಘ ಶಿಕ್ಷಾವರ್ಗದ ಸಮಾರೋಪದಲ್ಲಿ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಹಾಗೂ ಉದ್ಯಮಿ ಶ್ರೀ ಯಚ್ಚಾರೆಡ್ಡಿ ಸತೀಶ್ ಅವರು ಮುಖ್ಯ ಅತಿಥಿಯಾಗಿದ್ದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-19.